# ಕೌಟುಂಬಿಕ ಶಿಕ್ಷಣ

## ★ ಮಕ್ಕಳಿಗಾಗಿ ★

ಶ್ರೀ. ಎಂ. ವಿ. ಮ್ಯಾಥ್ಯು

ಆರ್. ಸಿ. ಎಚ್. ಯೋಜನೆಯ ಭಾಗವಾಗಿ

ನೋಸರ್ – ಇಂಡಿಯ. S410/93 ಪಾಯಂ 670 704

ಮಕ್ಕಳಿಗೆ ಲೈಂಗಿಕ ಶಿಕ್ಷಣದ ಬಗ್ಗೆ ತಿಳುವಳಿಕೆ ಮಾಡಿಸುವ ಚಟುವಟಿಕೆಯ
ಭಾಗವಾಗಿ ಪ್ರಕಟ ಮಾಡುತ್ತದೆ.

ಕನ್ಯೂಸಮ್ ನ್ಯೂಸ್ – ಪಾಯಂ 60 704

ಫೋನ್ : 2450675, 9446988866, 9846727289,

ಕನ್ನಟಿಕಾನ, ಪೆರ್ಲ ಪೋಸ್ಟ್ – 671 552

# ಮುನ್ನುಡಿ

ಶ್ರೀ ಎಂ. ವಿ. ಮಾಥ್ಯು ಅವರು ಬರೆದ ಕೌಟುಂಬಿಕ ಶಿಕ್ಷಣ ಮಕ್ಕಳಿಗೆ ಎಂಬ ಪುಸ್ತಕವನ್ನು ನಾನು ಶ್ರದ್ಧೆಯಿಂದ ಓದಿದೆನು. ಕತೆಯೊಂದನ್ನು ಓದುವ ರೀತಿಯಲ್ಲಿ ಸುಲಭವಾಗಿಯೂ ರಸವತ್ತಾಗಿಯೂ ಶಾಸ್ತ್ರ ಸತ್ಯಗಳನ್ನು ಮಕ್ಕಳಿಗೆ ತಿಳಿಸಲು ಇದು ಬಹಳ ಉಪಕಾರಪ್ರದವಾಗಿದೆ. ಇಂತಹ ಪುಸ್ತಕಗಳು ಕನ್ನಡ ಭಾಷೆಯಲ್ಲಿ ವಿರಳವಾಗಿದೆ. ಇಂತಹ ಕೊರತೆಯನ್ನು ನೀಗಿಸಲು ಮತ್ತು ಸರಿಯಾದ ತಿಳುವಳಿಕೆಯನ್ನು ಮಕ್ಕಳಿಗೆ ನೀಡಲು ಶ್ರೀ. ಎಂ. ವಿ. ಮಾಥ್ಯು ಅವರಿಗೆ ಸಾಧ್ಯವಾಗಿದೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಇನ್ನು ಮುಂದೆಯೂ ಅವರ ಪೆನ್ನಿನಿಂದ ಮುಂದಿನ ತಲೆಮಾರಿಗೆ ಅಗತ್ಯವಿರುವ ಪುಸ್ತಕಗಳು ಪ್ರಕಟವಾಗುವಂತಾಗಲಿ ಎಂದು ಹಾರೈಸುತ್ತೇನೆ.

ಪ್ರೈಮರಿ ಶಿಕ್ಷಣ ಮುಗಿಸಿದ ನಮ್ಮ ಸಹೋದರ'ಸಹೋದರಿಯರಿಗೆ ಈ ಪುಸ್ತಕವು ಉಪಯೋಗಕರವು, ಮಾರ್ಗದರ್ಶಿಯಾಗಿಯೂ ಆಗಲಿ ಎಂದು ಹಾರೈಸುತ್ತೇನೆ.

ಕಣ್ಣೂರು
31-10-2009

ಡಾ। ಪಿ. ವಿ. ಜೋರ್ಜ್ MD
ಪುತ್ತೂರ್ ಕಂಡಂ – ಕಣ್ಣೂರು – 2



*ಪ್ರೀತಿಯ ರಕ್ಷಕರೇ, ಸಹೋದರ ಸಹೋದರಿಯರೇ,*

ಕೌಟುಂಬಿಕ ಜೀವನದ ಬಗ್ಗೆ ಮಕ್ಕಳಿಗೆ ತಿಳಿಯಬೇಕಾದುದು ಏನು? ಯಾವಾಗ? ಅಥವಾ ಮಕ್ಕಳು ಇದನ್ನು ತಿಳಿಯಬೇಡವೆ..? ಮಕ್ಕಳಲ್ಲಿ ಈ ಬಗ್ಗೆ ತಿಳುವಳಿಕೆ ಮೂಡಿಸುವುದು ಸರಿಯೇ? ಲೈಂಗಿಕ ಶಿಕ್ಷಣ ನೀಡುವುದರಿಂದ ಮಕ್ಕಳು ದಾರಿ ತಪ್ಪುವ ಸಾಧ್ಯತೆ ಇದೆ. ಮಕ್ಕಳ ಭವಿಷ್ಯವನ್ನು ಹಾಳುಗೆಡವಬಾರದು. ಲೈಂಗಿಕ ಶಿಕ್ಷಣ ನೀಡುವುದರಿಂದ ಅನೇಕ ಸಮಸ್ಯೆಗಳಿಗೂ ಸಂಶಯಗಳಿಗೂ ಪರಿಹಾರ ಸಿಗಬಹುದು.

ಮಕ್ಕಳಿಗೆ ಲೈಂಗಿಕ ಶಿಕ್ಷಣ ಯಾರು ನೀಡಬೇಕು? ಹೇಗೆ ನೀಡಬೇಕು? ಒಟ್ಟಿಗೆ ನೀಡಬೇಕೋ – ಈ ವಿಷಯಗಳು ಚರ್ಚೆಗೆ ಒಳಗಾಗಬೇಕಾದ ಅಗತ್ಯವಿದೆ. **Family Planning Association** ನಡೆಸಿದ ಸರ್ವೆಯೊಂದರಲ್ಲಿ ಮಕ್ಕಳ ಅಭಿಪ್ರಾಯದಂತೆ ತಾವು ಕಲಿಯುವ ಶಾಲಾಧ್ಯಾಪಕರ ಮೂಲಕ ಇಂತಹ ಶಿಕ್ಷಣವನ್ನು ತಿಳಿಯಲು ಇಷ್ಟಪಡುವುದಿಲ್ಲ.

ಈ ಪ್ರದೇಶದ ಒಂದು ವೈಶಿಷ್ಟ್ಯತೆಯನ್ನು ಪರಿಗಣಿಸಿ ಹುಡುಗಿಯರನ್ನು ಮನೆಯಿಂದ ದೂರಮಾಡುವುದನ್ನು ಕೊನೆಗೊಳಿಸಿ ಸಮಾಜದಲ್ಲಿ ಒಂದು ಬದಲಾವಣೆಯನ್ನು ಉಂಟು ಮಾಡುವ ಉದ್ದೇಶವಿದೆ. ಆರ್. ಸಿ. ಎಚ್. ಯೋಜನೆಯ ಅಂಗವಾಗಿ ಪ್ರಕಟವಾಗುತ್ತಿರುವ ಈ ಪುಸ್ತಕವು ಮಕ್ಕಳಿಗೆ ಪ್ರಯೋಜನವಾದರೆ ಅದು ಸಂತೋಷದ ವಿಷಯ.

ಈ ಪುಸ್ತಕವನ್ನು ಕನ್ನಡ ಭಾಷೆಗೆ ಅನುವಾದ ಮಾಡಿದ ಶ್ರೀಮತಿ ಆಯಿಷಾ ಎ. ಎ. ಪೆರ್ಲ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಪುಸ್ತಕ ಓದಿ ನಿಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು *ಕೋರ್ಡಿನೇಟರ್ ನೋಸರ್ ಇಂಡಿಯಾ ಕನ್ನಟಿಕಾನ, ಪಿ. ಒ. ಪೆರ್ಲ 671 552* ಇವರಿಗೆ ಕಳುಹಿಸಿ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

*ಕೃತಜ್ಞತೆಗಳೊಂದಿಗೆ*

ಶ್ರೀ ಎಂ. ವಿ. ಮಾಥ್ಯು

## ಕೌಟುಂಬಿಕ ಶಿಕ್ಷಣ

ಸಿಂಧು ಮತ್ತು ರಾಣಿ ಒಂಭತ್ತನೇ ತರಗತಿಯಲ್ಲಿ ಕಲಿಯುತ್ತಿದ್ದಾರೆ. ಹಳ್ಳಿಯ ಮನೆಯಿಂದ ಸಿಂಧು ಶಾಲೆಗೆ ನಡೆದು ಬರುತ್ತಿದ್ದರೆ ರಾಣಿ ಶಾಲೆಗೆ ಬರುವುದು ಮತ್ತು ಮನೆಗೆ ಹಿಂತಿರುಗುವುದು ಕಾರಿನಲ್ಲಿಯೇ. ಕೃಷಿಕರಾದ ತಂದೆ ತಾಯಿಯರೊಂದಿಗೆ ವಾಸಿಸುವ ಸಿಂಧು ತಂದೆತಾಯಂದಿರ ಸ್ನೇಹವನ್ನು ಪ್ರೀತಿಯನ್ನು ಸಾಕಷ್ಟು ಅನುಭವಿಸುತಿದ್ದಳು. ಆದರೆ ರಾಣಿಯ ತಂದೆ ಮತ್ತು ತಾಯಿ ವಿದೇಶದಲ್ಲಿ ಕೆಲಸವಿರುವವರು. ಚಿಕ್ಕಪ್ಪನೊಂದಿಗೆ ರಾಣಿ ವಾಸಿಸುತ್ತಿದ್ದಳು. ಕೌಟುಂಬಿಕ ಜೀವನದಲ್ಲಿ ತಂದೆ, ತಾಯಿ, ಸಹೋದರರು ಅವರ ಪ್ರೀತಿ ಏನೆಂಬುದು ರಾಣಿಗೆ ಗೊತ್ತೇ ಇರಲಿಲ್ಲ. ಶ್ರೀಮಂತಿಕೆಯ ಸುಖಸೌಕರ್ಯಗಳೊಂದಿಗೆ ರಾಣಿ ಬೆಳೆದಳು. ಸಿಂಧುವಿನ ಲವಲವಿಕೆ ಮತ್ತು ಉತ್ಸಾಹವನ್ನು ರಾಣಿ ಯಾವಾಗಲೂ ಗಮನಿಸುತ್ತಿದ್ದಳು. ತನಗೆ ಎಲ್ಲಾ ಸುಖಸೌಕರ್ಯಗಳಿದ್ದರೂ ಯಾಕೆ ಸಂತೋಷ ದೊರಕುವುದಿಲ್ಲ ಎಂದು ರಾಣಿ ಚಿಂತಿತಳಾಗಿದ್ದಳು. ಅವಳು ಅನೇಕ ಬಾರಿ ಸಿಂಧುವಿನೊಡನೆ ಈ ವಿಷಯದ ಬಗ್ಗೆ ಕೇಳುತ್ತಿದ್ದಳು. ಆಗ ಸಿಂಧು ಅದೆಲ್ಲವೂ ನಿನ್ನ ಊಹೆ. ನಿನ್ನ ತಂದೆಯಂತೆಯೇ ಆರೈಕೆ ಮಾಡುವ ಚಿಕ್ಕಪ್ಪ ಮತ್ತು ಚಿಕ್ಕಮ್ಮ ಇದ್ದಾರೆ. ಹಾಗೆಯೇ ಯಾವುದೇ ಅಗತ್ಯಕ್ಕೂ ಬೇಕಾದಾಗಲೆಲ್ಲ ಹಣ ಕಳುಹಿಸುವ ತಂದೆ ತಾಯಿಯರಿಲ್ಲವೇ? ಮಾತ್ರವಲ್ಲ ಅವರು ವಿದೇಶದಲ್ಲಿ ದುಡಿಯುವುದೇ ನಿನಗಾಗಿಯಲ್ಲವೇ ಎಂದು ಸಮಾಧಾನ ಮಾಡುತ್ತಿದ್ದಳು.

'ನನಗೆ ಬೇಕಾಗಿರುವುದು ಹಣವಲ್ಲ. ನನ್ನ ತಂದೆ ತಾಯಿಯ ಬಳಿ ಇದ್ದರೆ ಸಾಕು' ಒಮ್ಮೆ ಬೇಸರದಿಂದ ರಾಣಿ ಹೇಳುತ್ತಾಳೆ.

ಅದೇನು ನಿನಗೆ ಈಗ ಇಷ್ಟೊಂದು ಆಸೆ. ರಾಣಿಯ ಮುಖವನ್ನು ನೋಡಿ ಅವಳನ್ನು ಗಮನಿಸುತ್ತಾ ಸಿಂಧು ಕೇಳುತ್ತಾಳೆ.

ಅದು, ನನಗೆ ಭಯವಾಗುತ್ತದೆ. ಕಳೆದ ದಿನ ನನ್ನ ದೇಹದಿಂದ ರಕ್ತ ಹೋಯಿತು. ನಾನು ಚಿಕ್ಕಮ್ಮನೊಂದಿಗೆ ಹೇಳಿದಾಗ ಅವರು ನಗುತ್ತಾ ಹೇಳಿದ್ದು ನಾನು ತುಂಬಾ ಜಾಗರೂಕಳಾಗಿರಬೇಕೆಂದು. ಮಾತ್ರವಲ್ಲ ಮೊದಲಿನಂತೆ ಎಲ್ಲರೊಂದಿಗೆ ಮಾತನಾಡಲು, ಆಡಲು ನಿಲ್ಲಬಾರದೆಂದು ತಾಕೀತು ನೀಡಿದ್ದಾಳೆ. ಚಿಕ್ಕಮ್ಮ ಏನು ಹೇಳಿದ್ದು?

ಓ, ಅದೋ ವಿಷಯ. ನನಗೆ ಇದು ಐದಾರು ತಿಂಗಳು ಮೊದಲೇ ಆಗಿದೆ. ನನ್ನ ತಾಯಿಯೂ ನನಗೆ ಇನ್ನು ಜಾಗರೂಕಳಾಗಿರಬೇಕೆಂದು ತಿಳಿಸಿರುತ್ತಾಳೆ. ಮೊದಲಿನಂತೆ ಎಲ್ಲರೊಂದಿಗೆ ಗೆಳೆತನ ಮಾಡಬಾರದೆಂದೂ ನೀನು ಒಬ್ಬ ಮಹಿಳೆಯಾದೆ ಎಂದೂ ತಿಳಿಸಿದ್ದಾಳೆ. ನನಗೆ ಏನೂ ಬೇಸರವಾಗಲಿಲ್ಲ. ಮತ್ತೇಕೆ ನಿನಗೆ ಇಷ್ಟು ಬೇಸರ? ಎಂದು ಸಿಂಧು ಕೇಳುತ್ತಾಳೆ.

ಅದೋ, ನೆರೆಮನೆಯ ಹೆಂಗಸರೊಂದಿಗೆ ಚಿಕ್ಕಮ್ಮ ಹೇಳುವುದು ಕೇಳಿಸಿತು. ಹೆಣ್ಣು ಪ್ರಾಯಪೂರ್ತಿಯಾದಳು. ಇನ್ನು ಮೊದಲಿನ ಶ್ರದ್ಧೆ ಸಾಲದು. ದೇಹವೂ ಬೆಳೆದಿದೆ. ಎಂಟು ಕಣ್ಣಿದ್ದರೂ ಯಾವಾಗ ಗಮನ ತಪ್ಪುವುದೆಂದು ಗೊತ್ತಾಗುವುದಿಲ್ಲ. ಅಕ್ಕನಿಗೆ ಅಲ್ಲಿದ್ದರೆ ಸಾಕು. ಇನ್ನು ನನ್ನ ಕಷ್ಟವೇ–ಇದನ್ನು ಹೇಳುವಾಗ ರಾಣಿಯ ಕಣ್ಣಲ್ಲಿ ನೀರು ಸುರಿಯಿತು.

ನೀನು ಅದನ್ನೆಲ್ಲ ತಲೆಗೆ ಹಚ್ಚಿಕೊಳ್ಳಬೇಡ. ಹುಡುಗಿಯರಾದರೆ ನಮಗೆ ಸ್ವಲ್ಪ ನಿಯಂತ್ರಣ ಬೇಕು. ಪ್ರಾಯಪೂರ್ತಿಯಾದಾಗ ತಂದೆತಾಯಿಯರೂ, ಪೋಷಕರೂ ಸ್ವಲ್ಪ ನಿಯಂತ್ರಣ ಮಾಡುತ್ತಾರೆ. ಅದು ನಮ್ಮ ಒಳಿತಿಗಾಗಿಯೇ. ನಮ್ಮ ಬದುಕಿನಲ್ಲಿ ತಪ್ಪುಗಳುಂಟಾಗದಿರಲು –

ಸಿಂಧು ಹೇಳುತ್ತಾಳೆ.

ಯಾವ ತಪ್ಪನ್ನು ನಾವು ಮಾಡುವುದು. ಕಳೆದ ವಾರದವರೆಗೆ ನನ್ನ ಕೋಣೆಗೆ ಬರುತ್ತಿದ್ದ ನೆರೆಮನೆಯ ಸತೀಶನೊಡನೆ ಇನ್ನು ಮುಂದೆ ನನ್ನ ಕೋಣೆಗೆ ಬರಬಾರದೆಂದು ಚಿಕ್ಕಮ್ಮ ಹೇಳಿದಳು. ಕಾಲೇಜಿನಲ್ಲಿ ಕಲಿಯುವ ಸತೀಶನೆಂದರೆ ನನಗೆ ಇಷ್ಟ. ನನಗೆ ಪಾಠಗಳನ್ನು ಹೇಳಿಕೊಡುತ್ತಾರೆ. ಸಂಶಯಗಳಿದ್ದರೆ ನಿವಾರಿಸುತ್ತಾನೆ. ಹೋಂವರ್ಕ್ ಮಾಡಲೂ ಸಹಾಯ ಮಾಡುತ್ತಾರೆ. ರಾಣಿ ಬೇಸರದಿಂದ ನುಡಿದಳು.

ಓ! ಅದಾ, ಹುಡುಗಿಯ ಬೇಸರಕ್ಕೆ ಕಾರಣ. ಸಿಂಧು ಮುಗುಳ್ನಗುತ್ತಾ ಹೇಳುತ್ತಾಳೆ ಅಥವಾ ಸತೀಶಣ್ಣ ನಿನ್ನೊಡನೆ ಏನಾದರೂ ಹೇಳಿದರೋ?

ನೀನು ಯಾರೊಂದಿಗೂ ಹೇಳಬೇಡ. ಅಂದು ಸತೀಶಣ್ಣ ಬಂದಾಗ ಮನೆಯಲ್ಲಿ ಯಾರೂ ಇರಲಿಲ್ಲ. ನನ್ನನ್ನು ಅಪ್ಪಿಕೊಳ್ಳುತ್ತಾ ನೀನು ತಾಯಿಯಾಗುವಷ್ಟು ದೊಡ್ಡದಾಗಿದ್ದೀಯಲ್ಲ ಎಂದು ಹೇಳಿದ್ದಾನೆ. ಮಾತ್ರವಲ್ಲ ನನ್ನ ಇಚ್ಛೆಗೆ ವಿರುದ್ಧವಾಗಿ ನನಗೆ ಒಂದು ಚುಂಬನವನ್ನೂ ನೀಡಿದ್ದಾರೆ. ನನಗೆ ಅತೀವ ಆನಂದವಾಯಿತು. ಅಂದಿನವರೆಗೂ ತೋರದಿದ್ದ ಯಾವುದೋ ಒಂದು ಭಾವನೆ ನನ್ನ ಮನಸ್ಸಿನಲ್ಲಿ ಸುಳಿದು ಹೋಯಿತು. ಆಗ ಚಿಕ್ಕಮ್ಮನ ಮಗಳು ಬಂದದ್ದು ಮತ್ತು ನಮ್ಮನ್ನು ನೋಡಿದ್ದು – ರಾಣಿ ಬೇಸರದಿಂದ ನುಡಿದಳು.

'ನಂತರ ಏನಾಯಿತು?' ಸಿಂಧು ಕೇಳಿದಳು.

ಆ ಹುಡುಗಿ ಅಯ್ಯೋ! ಕಷ್ಟ ಎನ್ನುತ್ತಾ ಓಡಿ ಚಿಕ್ಕಮ್ಮನಿಗೆ ವಿಷಯ ತಿಳಿಸಿದಳು. ಚಿಕ್ಕಮ್ಮ ಬಂದು ನೋಡಿದಾಗ ಅವರ ಮುಖ ಅಯ್ಯೋ ಅದನ್ನು ನೆನಪಿಸಲೇ ಆಗುವುದಿಲ್ಲ. ಸತೀಶಣ್ಣನನ್ನು ಬೈದು ಕಳುಹಿಸಿದರು. ಇನ್ನು ಸತೀಶಣ್ಣನನ್ನು ಕಾಣಬಾರದೆಂದು ನನ್ನೊಡನೆ ಹೇಳಿದರು. ನಾನು ಯಾವ ತಪ್ಪು ಮಾಡಿದ್ದೇನೆ? ನಾನು ಸತೀಶಣ್ಣನನ್ನು ಕಾಣಬಾರದೆಂದು ಯಾಕೆ ಹೇಳುತ್ತಾರೆ. ನಾನು ಯಾರ ಬಳಿ ಕೇಳಬೇಕು. ತಾಯಿಯೂ ಇಲ್ಲ. ಬಳಿಯಲ್ಲಿ ಅಕ್ಕಂದಿರೂ ಇಲ್ಲ ರಾಣಿ ಹೇಳಿದಳು.

ಪ್ರಾಯಕ್ಕೆ ಬಂದ ಹುಡುಗಿಯರು ಕೆಲವೊಂದು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಹುಡುಗಿಯರು ಅಪ್ಪಿತಪ್ಪಿ ಸ್ವಲ್ಪ ಉದಾಸೀನತೆ ತೋರಿದರೂ ಅವರ ಜೀವನದ ಮೌಲ್ಯನೇ ನಷ್ಟವಾಗುತ್ತದೆ. ಆದುದರಿಂದ ಚಿಕ್ಕಮ್ಮ ನಿನ್ನೊಡನೆ ಸಿಟ್ಟು ಮಾಡಿದ್ದು. ಸತೀಶನೊಡನೆ ಅತೀ ಸಲುಗೆ ಸಲ್ಲದೆಂದೂ ಮಾತನಾಡಬಾರದೆಂದೂ ಹೇಳಿದ್ದು ಎಂದು ಸಿಂಧು ರಾಣಿಗೆ ಮನವರಿಕೆ ಮಾಡಿದಳು.

ಆದರೆ ನಾನು ಇದುವರೆಗೂ ಮಾತನಾಡಿಯೂ ಬಳಿಯಲ್ಲಿದ್ದೂ ಏನೂ ಆಗಲಿಲ್ಲವಲ್ಲ. ಮತ್ತೇಕೆ ಈಗ ಮಾತ್ರ ಇಂತಹ ಬಂಧನ ? ಈಗ ಡ್ರೈವರ್ ಕೂಡಾ ಮೊದಲಿಗಿಂತ ಸಲಿಗೆ ತೋರತೊಡಗಿದ್ದಾರೆ. ಈಗ ಅವರು ತಮಾಷೆಯ ಮಾತನಾಡಲೂ ಆರಂಭಿಸಿದ್ದಾರೆ. ನಾನು ಅದನ್ನೆಲ್ಲಾ ಗಮನಿಸುವುದಿಲ್ಲ. ಹಾಗೆಯೇ ಅಂಗಡಿಗೆ ಹೋದರೆ ಅವರೆಲ್ಲರೂ ನನ್ನನ್ನು ಗಮನಿಸುವಂತೆ ತೋರುತ್ತದೆ. ಇದಕ್ಕೆಲ್ಲಾ ಕಾರಣವೇನು? ರಾಣಿ ಕೇಳುತ್ತಾಳೆ.

ಅಯ್ಯೋ ಹುಡುಗಿ, ನನಗೆ ಇದೇನೂ ಗೊತ್ತಿಲ್ಲ. ಇದೆಲ್ಲ ಊಹೆ ಮಾತ್ರ. ಮತ್ತೆ ಒಂದು ಸಿಹಿ ಸುದ್ದಿ ಇದೆ. ನನ್ನ ಚಿಕ್ಕಮ್ಮ ಬರುತ್ತಿದ್ದಾರೆ. ಅವರು ಎಲ್ಲಿದ್ದಾರೆ ತಿಳಿದಿದೆಯಾ? ಅವರು ಚಿಕಾಗೋದಲ್ಲಿ



ಡಾಕ್ಟರಾಗಿದ್ದಾರೆ. ನಾನು ಅವರನ್ನು ಪ್ರಥಮವಾಗಿ ಕಾಣಲಿದ್ದೇನೆ. ಅವರು ಆರು ವರ್ಷದ ನಂತರ ಊರಿಗೆ ಬರುತ್ತಿದ್ದಾರೆ. ನಿನಗೇನು ಬೇಕು ಎಂದು ಸಿಂಧು ಕೇಳುತ್ತಾಳೆ.

ನನಗೆ ಏನೂ ಬೇಡ. ನೀನು ಟೂರು ಹೋಗುವುದಿದ್ದರೆ ಮಾತ್ರ ನಾನೂ ಜೊತೆಗೆ ಬರುತ್ತೇನೆ. ಚಿಕ್ಕಮ್ಮನೊಡನೆ ಹೇಳಿ ನನಗೆ ಒಮ್ಮೆ ಹೊರಗೆ ಹೋಗಲು ಅವಕಾಶ ದೊರೆಯಬಹುದಲ್ಲವೇ? ರಾಣಿ ಹೇಳಿದಳು. ಶಾಲೆಯ ಬೆಲ್ಲು ಬಾರಿಸಿತು. ಗೆಳತಿಯರು ಕ್ಲಾಸಿಗೆ ನಡೆದರು

## II

ಮುಂಜಾನೆ ಸುಂದರವಾಗಿತ್ತು. ಬೆಳಿಗ್ಗೆ ಪೇಪರ್ ಓದುತ್ತಿದ್ದ ಜನಾರ್ಧನ ನಾಯರ್ ಹೆಂಡತಿ ಪಂಕಜವಲ್ಲಿಯನ್ನು ಕರೆದರು.

ಪಂಕಜ, ಪಂಕಜ ಬಾರೇ.

ಇದೇನಾಯಿತು ಈ ಮನುಷ್ಯನಿಗೆ. ಪಂಕಜ ಗಂಡನನ್ನು ಕರೆಯುವುದು ಮನುಷ್ಯನೆಂದು. ಕೆಲವೊಮ್ಮೆ ಮಕ್ಕಳ ತಂದೆ ಎಂದೂ ಕರೆಯುತ್ತಾರೆ. ಜನಾರ್ಧನ ನಾಯರಿಗೆ ವಯಸ್ಸು ಐವತ್ತಾಯಿತು. ಕೃಷಿ ಕಸುಬು. ಸದಾ ಕರ್ಮಯೋಗಿ. ನಾಲ್ಕು ಮಕ್ಕಳಲ್ಲಿ ಕೊನೆಯವಳೇ ಸಿಂಧು.

ಬೆಳಿಗ್ಗೆ ಕಾಫಿ ತಯಾರಿಸುವ ಅವಸರದಲ್ಲಿದ್ದರು ಪಂಕಜ. ಮೂವರು ಮಕ್ಕಳೂ ಕಾಲೇಜಿನಲ್ಲಿ ಕಲಿಯುತ್ತಿದ್ದಾರೆ. ನಾಲ್ಕನೇ ಮಗಳು ಸಿಂಧು ಶಾಲೆಯಲ್ಲಿ ಕಲಿಯುತ್ತಾಳೆ. ಪಂಕಜ ಗಂಡನ ಬಳಿ ಬಂದು ವಿಷಯವೇನೆಂದು ಕೇಳುತ್ತಾಳೆ.

ನೀನು ಇದನ್ನು ಓದಿದ್ದೀಯಾ? 12 ವರ್ಷದ ಹುಡುಗಿಗೆ ಹೆರಿಗೆ! ಜನಾರ್ಧನ ನಾಯರು ಪೇಪರ್ ಓದುತ್ತಾರೆ.

ಅಯ್ಯೋ! ನಿಮಗೆ ಬೆಳಿಗ್ಗೆಯೇ ದೊರಕಿದ ವಾರ್ತೆ ಇದೋ? ನನಗೆ ಅಡುಗೆ ಮನೆಯಲ್ಲಿ ಕೆಲಸ ರಾಶಿ ಬಿದ್ದಿದೆ. ಮಕ್ಕಳಿಗೆ ಕೇಳದಿರಲಿ. ಇದನ್ನು ಓದಲೇನ್ನ ನೀವು ಪತ್ರಿಕೆ ನೋಡುವುದು! ಪಂಕಜ ಒಳಗೆ ಹೋಗುತ್ತಾಳೆ.

'ಕಲಿಯುಗ' ಎಂದೇ ಹೇಳಬೇಕು. ಇನ್ನು ಧೈರ್ಯದಿಂದ ಹೊರಗೆ ಹೋಗುವುದೂ ಕಷ್ಟ. ಜನಾರ್ಧನ ನಾಯರು ತಮ್ಮಷ್ಟಕ್ಕೇ ಹೇಳಿಕೊಂಡರು.

ಓದಿನಲ್ಲಿ ತೊಡಗಿದ್ದ ಸಿಂಧು ತಂದೆಯು ತಾಯಿಯನ್ನು ಕರೆಯುವುದನ್ನೂ ನಂತರ ಹೇಳಿದ ವಿಷಯಗಳನ್ನೂ ಕೇಳಿದಳು. ತಂದೆ ಪೇಪರ್ ಓದಿ ಹೊರಗೆ ಹೋದಾಗಲೇ ಸಿಂಧು ವರಾಂಡಕ್ಕೆ ಹೋಗಿ ಪೇಪರ್ ನೋಡುತ್ತಾಳೆ. ಅಣ್ಣಂದಿರೂ ನೋಡುತ್ತಾರೆಯೇ ಎಂದು ಪರೀಕ್ಷಿಸಿ ನಂತರ ಪೇಪರಿನಲ್ಲಿದ್ದ ವಿಷಯಗಳನ್ನು ಓದುತ್ತಾಳೆ. ಹದಿನೆಂಟು ವರ್ಷದ ನೆರೆಮನೆಯ ಹುಡುಗ 7ನೇಯ ತರಗತಿಯಲ್ಲಿ ಕಲಿಯುತ್ತಿದ್ದ ಹುಡುಗಿಯನ್ನು ತಾಯಿಯಾಗಿ ಮಾಡಿದ್ದು. ಹೊಟ್ಟೆನೋವೆಂದು ಆಸ್ಪತ್ರೆಗೆ ಸೇರಿದ ಹುಡುಗಿ ಡಾಕ್ಟರು ಪರೀಕ್ಷಿಸಿ ಸ್ವಲ್ಪ ಸಮಯದ ಬಳಿಕ ಹೆರಿಗೆಯಾಗುತ್ತಾಳೆ. ತಾಯಿ ಮತ್ತು ಮಗು ಆರೋಗ್ಯದಿಂದಿದ್ದಾರೆ. ಗರ್ಭಿಣಿಯಾಗಲು ಕಾರಣನಾದ ಹುಡುಗ ತಪ್ಪನ್ನು ಒಪ್ಪಿದ್ದಾನೆ. ಅವನನ್ನು ಜೈಲಿಗೆ ಸೇರಿಸಲಾಗಿದೆ ಎಂದೂ ಅದರಲ್ಲಿತ್ತು.

ಏನೇ, ಹೊಸದಾಗಿ ಪೇಪರ್ ಓದುವಿಕೆ? ಪರೀಕ್ಷೆಗೆ ಬರೆಯಲು ಪೇಪರ್‌ನಲ್ಲಿರುವ ವಿಷಯವೇ ಬರುವುದು? ಅಮ್ಮ ಕೇಳುತ್ತಾಳೆ.

ಏನಿಲ್ಲ ಅಮ್ಮ, ಚಿತ್ರ ನೋಡುತ್ತಿದ್ದೆ. ಸಚಿನ್ ಶತಕ ಬಾರಿಸುವ ಚಿತ್ರ. ಸಾಕು ಸಾಕು!

ಹೋಂವರ್ಕ್ ಮುಗಿಯಿತಾ. ಮುಗಿದರೆ ಒಮ್ಮೆ ಬಾ. ತರಕಾರಿ ಹಚ್ಚಬೇಕು – ಅಮ್ಮ ಕರೆಯುತ್ತಾಳೆ.

ನಾನಿದೋ ಬಂದೆ – ಸಿಂಧು ಓಡಿ ಬರುತ್ತಾಳೆ.

ನೀನು ಸ್ವಲ್ಪ ತರಕಾರಿ ಕೊಯ್ಯು. ನಾನು ಚಟ್ನಿ ಅರೆಯುತ್ತೇನೆ ಎನ್ನುತ್ತಾಳೆ ಅಮ್ಮ.

ಸಿಂಧು ತರಕಾರಿ ಕೊಯ್ಯುವಾಗ ಪೇಪರಿನಲ್ಲಿ ಓದಿದ ವಿಷಯವೇ ತಲೆಯಲ್ಲಿತ್ತು. ಅಣ್ಣಂದಿರು ತಿಂಡಿ ತಿಂದು ಕಾಲೇಜಿಗೆ ಹೋದಾಗ ಸಿಂಧು ಮತ್ತು ತಾಯಿ ಇಬ್ಬರೇ ಇರುತ್ತಾರೆ. ಸಿಂಧುವಿನ ಊಟದ ಬಾಕ್ಸ್ ಅಮ್ಮ ತಯಾರುಮಾಡುತ್ತಿದ್ದರು.

ಅಮ್ಮ, ನನಗೊಂದು ಸಂದೇಹ. ಮದುವೆಯಾಗದೆ ಹುಡುಗಿಯರು ಹೆರಿಗೆಯಾಗುತ್ತಾರೆಯೇ? ತಾಯಿ ಮಗಳ ಮುಖವನ್ನೊಮ್ಮೆ ದಿಟ್ಟಿಸಿ ನೋಡುತ್ತಾರೆ. ಅಯ್ಯೋ ಹುಡುಗಿ! ಇದೆಂತಾ ಸಂಶಯ. ನಿನಗೆ ಎಲ್ಲಿಂದ ದೊರಕಿತು ಈ ವಿಷಯ? ಬೇಗ ಶಾಲೆಗೆ ನಡೆ. ತಂದೆಯೊಡನೆ ಹೇಳುತ್ತೇನೆ ನಿನ್ನ ಸಂಶಯ. ಶಾಲೆಯಿಂದ ಬಾ ನಿನಗೆ ತಕ್ಕ ಶಾಸ್ತಿ ಮಾಡುತ್ತೇನೆ ಎನ್ನುತ್ತಾ ಬಯ್ಯುತ್ತಾಳೆ.

ಏನಮ್ಮ ಇದು ! ನಾನು ಒಂದು ಸಂಶಯ ಕೇಳಿದ್ದಲ್ವಾ ಸಿಂಧು ಅನ್ನುತ್ತಾಳೆ. ಅಮ್ಮಾ ಶಾಲೆಗೆ ಹೋಗುತ್ತೇನೆ ಎನ್ನುತ್ತಾ ಸಿಂಧು ಶಾಲೆಗೆ ನಡೆಯುತ್ತಾಳೆ.

## III

ಮನೆಯಲ್ಲಿ ಅಣ್ಣಂದಿರ, ತಂದೆಯ ಜೋರಾದ ಸಂಭಾಷಣೆ, ನಗು ಕೇಳುತ್ತಾ ಸಿಂಧು ಮನೆಗೆ ಮುಟ್ಟುತ್ತಾಳೆ. ಏನಪ್ಪಾ ಇವತ್ತು ಮನೆಯಲ್ಲಿ ಕಾಯಿಸುವ, ಹುರಿಯುವ ಪರಿಮಳ ! ಬೆಳಿಗ್ಗೆ ಶಾಲೆಗೆ ಹೊರಡುವಾಗ ಯಾವ·ವಿಶೇಷವೂ ಇರಲಿಲ್ಲ. ಏನಪ್ಪಾ ಇಷ್ಟೊಂದು ಸಡಗರ! ಸಿಂಧು ಮನೆ ಮುಟ್ಟಿದಾಗ ಜಗಲಿಯಲ್ಲಿ ಯಾರನ್ನೂ ಕಾಣಲಿಲ್ಲ. ರೂಮಿನಲ್ಲಿ ಪುಸ್ತಕ ಇಟ್ಟು ಅಡುಗೆಕೋಣೆಗೆ ಬಂದಾಗ ಅಮ್ಮ ಹೇಳುತ್ತಾಳೆ.

ಪಕ್ಕದ ಕೋಣೆಗೆ ಹೋಗಿ ನೋಡೇ, ಅಪ್ಪ ಮತ್ತು ಅಣ್ಣಂದಿರಿದ್ದಾರೆ. ಮಾತ್ರವಲ್ಲ ಒಬ್ಬಳು ಅತಿಥಿಯೂ ಇದ್ದಾರೆ. ನಿನ್ನನ್ನ ಅವರೆಲ್ಲ ಕಾಯುತ್ತಿದ್ದಾರೆ – ಅಮ್ಮ ಹೇಳಿದರು.

ಇಲ್ಲ. ನಾನೆಲ್ಲಿಗೂ ಹೋಗುವುದಿಲ್ಲ. ನನಗೆ ವಿಪರೀತ ಹಸಿವಾಗುತ್ತಿದೆ. ಊಟ ಬಳಸು. ನೀನು ಒಮ್ಮೆ ಹೋಗಿ ಚಿಕ್ಕಮ್ಮನನ್ನು ನೋಡಿ ಬಾ. ಅವರು ಅಮೇರಿಕಾದಿಂದ ಬಂದಿದ್ದಾರೆ. ನಿನಗೆ ಏನೆಲ್ಲಾ ತಂದಿದ್ದಾರೆ ನೋಡು. ನೀನು ಅತ್ತ ಹೋಗು ಅಮ್ಮ ಹೇಳುತ್ತಾಳೆ.

ಅಮ್ಮನೂ ಜೊತೆ ಬಾ. ತಾಯಿಯ ಹಿಂದೆ ಸಿಂಧು ಅಪ್ಪ ಮತ್ತು ಅಣ್ಣಂದಿರಿದ್ದಲ್ಲಿಗೆ ಹೋಗುತ್ತಾರೆ.

ಅಯ್ಯೋ, ಇದಾ ಸಿಂಧು. ಅವಳನ್ನು ಕಂಡಕೂಡಲೇ ಚಿಕ್ಕಮ್ಮ ಓಡಿ ಬಂದು ಅಪ್ಪಿಕೊಳ್ಳುತ್ತಾಳೆ. ನಾನು ಭಾವಿಸಿದ್ದಕ್ಕಿಂತ ಬೆಳೆದಿದ್ದೀಯಲ್ಲಾ ನೀನು. ನಾನು ತಂದ ಬಟ್ಟೆಗಳೆಲ್ಲಾ ನಿನಗೆ ಸರಿಯಾಗುತ್ತಿದೆಯೆಂದು ತೋರುವುದಿಲ್ಲ. ಅಕ್ಕ ಮೊದಲಿದ್ದಂತೆ ಕಾಣುತ್ತಾಳೆ.

ಚಿಕ್ಕಮ್ಮನ ಅಕ್ಕರೆಯ ಮಾತುಗಳಿಂದ ಪುಳಕಿತಳಾದ ಸಿಂಧು ಕೆಂಪಗೆ ದುಂಡಗಿರುವ ಅವರನ್ನೇ ದಿಟ್ಟಿಸುತ್ತಾಳೆ. ತನ್ನ ಮನಸ್ಸಿನಲ್ಲಿದ್ದಕ್ಕಿಂತ ಯಾವ ಬದಲಾವಣೆಗಳು ಚಿಕ್ಕಮ್ಮನಲ್ಲಿವೆ ಎಂದು ನೋಡುತ್ತಾಳೆ. ಚಿಕ್ಕಮ್ಮಳಿಗೆ ಒರಗಿ ನಿಂತಾಗ ಆ ಪ್ರೀತಿಯ ಅಲೆಯಲ್ಲಿ ಅವಳು ಹರ್ಷ ಪುಳಕಿತಳಾಗುತ್ತಾಳೆ.

ನೋಡು, ಅವಳ ದೊಡ್ಡಸ್ತಿಕೆ ನೋಡಿ. ಏನೇ ನಮ್ಮ ಚಿಕ್ಕಮ್ಮಳೂ ಇವಳೇ. ದೊಡ್ಡ ಅಣ್ಣ ಅನಿಲ್ ಹೇಳುತ್ತಾನೆ.



ಅಣ್ಣ ತಮಾಷೆ ಮಾಡಬೇಡ. ನನಗೆ ಮೊದಲ ಬಾರಿಗೆ ಚಿಕ್ಕಮ್ಮನನ್ನು ಕಾಣುವ ಸಂತೋಷ – ಸಿಂಧು ಹೇಳುತ್ತಾಳೆ.

ಸರಿ ಮಗಳೇ, ರಾಜಿ ಕ್ರೈಸ್ತ ಡಾಕ್ಟರನ್ನು ಮದುವೆಯಾಗಿ ಹೋದಾಗ ಈ ರೀತಿ ಮತ್ತೆ ಕಾಣಬಹುದೆಂದು ಭಾವಿಸಿರಲಿಲ್ಲ. ಈಗಲಾದರೂ ಕಾಣುವ ಸಮಯವಾಯಿತಲ್ಲಾ! ಅಪ್ಪ ಹೇಳಿದರು. ಈಗ ಎಷ್ಟು ವರ್ಷವಾಯಿತು ರಾಜಿ? ಹದಿನೇಳು ವರ್ಷ ಕಳೆದುವು. ಮದುವೆಯಾದ ನಂತರ ಈಗ ಸ್ವತಂತ್ರಳಾಗಿ ಬರುವ ಹಾಗಾಯಿತು. ಉಳಿದವರೆಲ್ಲಾ ದೂಷಿಸುವುದನ್ನೂ, ಅವಗಣಿಸುವುದನ್ನೂ ಕಾಣಬೇಕಿತ್ತು. ಈಗ ಅದೇನೂ ದೊಡ್ಡ ವಿಷಯವಲ್ಲ. ಚಿಕ್ಕಮ್ಮ ಹೇಳುತ್ತಾರೆ.

ಮನುಷ್ಯನು ಕ್ಷಣಾರ್ಧದಲ್ಲಿ ಪ್ರಪಂಚದ ಯಾವ ಭಾಗಕ್ಕೆ ಬೇಕಾದರೂ ಮುಟ್ಟಲು ಸಾಧ್ಯವಿರುವ ಈ ಕಾಲದಲ್ಲಿ ಜಾತಿ ಮತ ಭೇದವಾಗಲೀ, ಚೌಕಟ್ಟುಗಳಾಗಲೀ ಇಲ್ಲ – ಅಪ್ಪ ಹೇಳುತ್ತಾರೆ.

ಹೌದಣ್ಣ. ನಾವು ಜಾತಿ, ಮತ, ವರ್ಗಗಳ ಹೆಸರು ಹೇಳಿ ನಮ್ಮಲ್ಲಿ ಅನೇಕರ ಹಕ್ಕುಗಳನ್ನೇ ಕೊನೆಗಾಣಿಸುತ್ತಿದ್ದೇವೆ. ಮನುಷ್ಯನನ್ನು ಮನುಷ್ಯನಾಗಿ ಕಾಣುವುದಿಲ್ಲ. ಇಲ್ಲಿ ಬದಲಾವಣೆ ಅನಿವಾರ್ಯ. ನಮ್ಮ ಮಕ್ಕಳು ಜಾತಿ, ಮತ, ಧರ್ಮಗಳ ಹೆಸರು ಹೇಳಿ ಜಗಳಕ್ಕೆ ನಾವು ಆಸ್ಪದ ನೀಡಲಾರೆವು.

ಎಲ್ಲರೂ ಕಾಫಿ ಕುಡಿಯೋಣ. ಅಡುಗೆ ಕೋಣೆಯಿಂದ ಪಂಕಜ ಕರೆಯುತ್ತಾಳೆ. ಸಿಂಧುವಿನ ಕೈ ಹಿಡಿದು ರಾಜಿ ಅಡುಗೆ ಕೋಣೆಗೆ ನಡೆಯುತ್ತಾಳೆ. ಸಿಂಧುವಿಗೆ ಚಿಕ್ಕಮ್ಮನ ಸ್ವಭಾವ ಹಾಗೂ ವರ್ತನೆ ಬಹಳ ಹಿಡಿಸಿತು.

ಅವಳ ಜಂಭ ನೋಡಿ ಆಂಟಿಯ ಕೈಹಿಡಿದು ನಡೆಯುವುದು, ಮಾತನಾಡುವುದು ಬೇಡ ಆಂಟಿ. ಸ್ವಲ್ಪ ದೂರವಿರಿಸುವುದು ಆಂಟಿಗೆ ಉತ್ತಮ. ಅನಿಲ್ ಮತ್ತು ರೂಪೇಶ್ ಜೊತೆಯಾಗಿ ಹೇಳಿದರು.

ನಿಲ್ಲಿಸಿ ಮಕ್ಕಳೇ, ಸಿಂಧುವಿಗೆ ನಾವಲ್ಲದೆ ಬೇರೆ ಯಾರಿದ್ದಾರೆ ? ನೀವೆಲ್ಲ ಮಜಾ ಮಾಡುವಾಗ ಇವಳಿಗೆ ಎಷ್ಟು ಬೇಸರವಾಗಿರಬಹುದು? ಇವತ್ತು ಅವಳ ದಿನ ಅಲ್ಲವೇ ಮಗಳೇ – ಆಂಟಿ ಹೇಳುತ್ತಾಳೆ.

ಮೇಜಿನಲ್ಲಿ ಸ್ವಾದಿಷ್ಟವಾದ ಉಪಹಾರ ಸಿದ್ಧವಾಗಿತ್ತು. ಸಿಂಧುವನ್ನು ಬಳಿಯಲ್ಲಿ ಕುಳ್ಳಿರಿಸಿ ಚಿಕ್ಕಮ್ಮ ಅವಳೊಡನೆ ತಮಾಷೆ ಮಾತನಾಡುತ್ತಾ ಒಂದೊಂದೇ ತಿಂಡಿಗಳನ್ನು ತಿನ್ನಿಸುತ್ತಿದ್ದಳು. ಅಮ್ಮನ ಬಿಡುವಿಲ್ಲದ ಕೆಲಸದ ಸಮಯಗಳಲ್ಲಿ ಸಿಗದಿದ್ದ ಪ್ರೀತಿಯನ್ನು ಆಂಟಿಯಿಂದ ಪಡೆಯಲು ಸಾಧ್ಯವಾದದ್ದು ಅವಳನ್ನು ಹರ್ಷ ಪುಳಕಿತಗೊಳಿಸಿತು.

ಸಿಂಧು ಮಗಳೇ, ಕಾಫಿ ಕುಡಿದ ನಂತರ ಆಂಟಿಯನ್ನು ಕರೆದುಕೊಂಡು ತೋಟವನ್ನೂ, ದೇವಸ್ಥಾನವನ್ನೂ ತೋರಿಸು. ಕೆರೆ ಮತ್ತು ತೋಟ, ಗದ್ದೆಗಳು ಆಂಟಿಗೆ ಇಷ್ಟವಾಗಬಹುದು. ಅನಿಲ್ ಮತ್ತು ರೂಪೇಶ್ ನೀವು ಸಂತೆಯವರೆಗೆ ಹೋಗಬೇಕು. ಲೇ ಪಂಕಜಂ ನಿನಗೆ ಅಡುಗೆ ಮನೆಗೆ ಏನಾದರೂ ಸಾಮಗ್ರಿಗಳು ಬೇಕೆ? ಜನಾರ್ಧನ ನಾಯರ್ ಕೇಳುತ್ತಾರೆ.

ರೂಪೇಶ್, ನೀನು ಆ ಲಿಸ್ಟಿನಲ್ಲಿರುವ ಸಾಮಾನುಗಳನ್ನು ಕೊಳ್ಳಲು ಮರೆಯಬೇಡ. ಪಂಕಜಂ ಹೇಳುತ್ತಾಳೆ.

## IV

ಅಯ್ಯೋ ಈ ಹುಂಜದ ಒಂದು ಕೆಲಸ. ಸಿಂಧು ಕಲ್ಲನ್ನು ತೆಗೆದು ಹುಂಜಕ್ಕೆ ಬಿಸಾಡುತ್ತಾಳೆ.

ಯಾಕೆ ಮಗಳೇ ಅದಕ್ಕೆ ಕಳ್ಳೆಸೆಯುವುದು? ಅದು ಸಂಗಾತಿಯೊಡನೆ ಸಂತೋಷ ಪಡುವುದಲ್ಲವೇ? ಜೀವನದ ಉಳಿಯುವಿಕೆಗೆ ಇದು ಅತೀ ಅವಶ್ಯಕವಲ್ಲವೇ? ಅವು ಬೇಕಾದ ರೀತಿಯಲ್ಲಿ ಜೀವಿಸಲಿ. ನಾವು ಗಮನಿಸುವುದು ಬೇಡ ರಾಜಿ ಹೇಳುತ್ತಾಳೆ.

ಆಂಟಿ ಡಾಕ್ಟರಲ್ಲವೇ? ಆಂಟಿಗೆ ಮಕ್ಕಳಿದ್ದಾರೆಯೇ? ಅವರನ್ನೇಕೆ ಊರಿಗೆ ಕರಕೊಂಡು ಬಾರದ್ದು?

ರಾಜಿ ಮಗಳೇ, ಆಂಟಿ ಡಾಕ್ಟರಾಗಲು ಕಲಿಯುತ್ತಿದ್ದಾಗಲೇ ಫಿಲಿಪ್‌ನನ್ನು ಪರಿಚಯವಾದದ್ದು ಮತ್ತು ಮದುವೆಯಾದದ್ದು. ಅದೆಲ್ಲಾ ನಿನಗೆ ತಿಳಿಯುವ. ನಿನಗೆ ಫ್ರೆಡ್ಡಿ ಎಂಬ ಅಣ್ಣನಿದ್ದಾನೆ. ಅವನಿಗೆ ಪರೀಕ್ಷೆಯಾದುದರಿಂದ ಬರಲಿಲ್ಲ. ಮುಂದಿನ ಬಾರಿ ಬರುವಾಗ ಕರೆದುಕೊಂಡು ಬರುತ್ತೇನೆ, ತಿಳಿಯಿತಾ? ಆಂಟಿ ಫ್ರೆಡ್ಡಿ ಅಣ್ಣನನ್ನು ಕರೆದುಕೊಂಡು ಬನ್ನಿ. ಚಿಕ್ಕಪ್ಪನನ್ನು ಕರೆದುಕೊಂಡು ಬನ್ನಿ– ರಾಜಿ ಅವಸರ ಪಡಿಸಿದಳು.

ತೋಟದಲ್ಲಿ ನಡೆದು ಅವರು ಆಡಿನ ಗೂಡಿನ ಬಳಿಗೆ ಮುಟ್ಟುತ್ತಾರೆ. ಆಂಟಿ, ಇದು ನನ್ನ ಆಡು. ಈ ವಾರ ಹೆರಿಗೆಯಾಗಬಹುದೆಂದು ಅಮ್ಮ ಹೇಳಿದ್ದಾಳೆ. ಆಂಟಿ ಇಲ್ಲಿ ಇರುವಾಗ ನನ್ನ ಲೆಕ್ಕದಲ್ಲಿ ಆಡಿನ ಹಾಲನ್ನು ಕೊಡುತ್ತೇನೆ.

ನೀನು ಹುಷಾರಿದ್ದೀಯಲ್ಲಾ. ನೀನು ಆಡು ಬೆಳೆಸುವುದನ್ನೂ ಕಲಿತಿದ್ದೀಯಲ್ಲ. ಒಳ್ಳೆಯ ಹುಡುಗಿಯರೆಂದರೆ ಹೀಗೆ. ಸ್ವಂತವಾಗಿ ಒಂದು ಉಳಿತಾಯ ಬೇಕು.

ಅಮೇರಿಕಾದಲ್ಲಿ ಹದಿನೆಂಟು ವರ್ಷವಾಗುವಾಗಲೇ ಮಕ್ಕಳು ಕೆಲಸ ಮಾಡಲು ಶುರು ಮಾಡುತ್ತಾರೆ. ಮನೆ ಬಾಡಿಗೆ, ಊಟದ ಖರ್ಚನ್ನು ಅವರೇ ಭರಿಸುತ್ತಾರೆ. ಮಾತ್ರವಲ್ಲ ತಂದೆ ತಾಯಿಯರನ್ನು ಕಷ್ಟಪಡಿಸುವುದಿಲ್ಲ. ಯಾವ ಕೆಲಸವನ್ನು ಮಾಡಲೂ ಅವರಿಗೆ ಸಂಕೋಚವಿಲ್ಲ – ರಾಜಿ ಹೇಳುತ್ತಾಳೆ.

ಯಾವ ಯಾವ ಉದ್ಯೋಗಗಳನ್ನು ಅವರು ಮಾಡುತ್ತಾರೆ ? ಸಿಂಧು ಕೇಳುತ್ತಾಳೆ. ಪೇಪರ್ ಮಾರುವುದು, ಕಾರು ತೊಳೆಯುವುದು, ಪೈಂಟಿನ ಕೆಲಸ, ಕಲ್ಲು, ಮರಳು ಹೊರುವುದು, ತೋಟವನ್ನು ಸ್ವಚ್ಛ ಮಾಡುವುದು ಮೊದಲಾದ ಯಾವ ಕೆಲಸ ಮಾಡಲೂ ಅವರಿಗೆ ಸಂಕೋಚವಿಲ್ಲ. ಕೆಲಸ ಮಾಡುವುದು ಸಂತೋಷವಾಗಿಯೇ ಅವರಿಗೆ ತೋರುತ್ತದೆ. ರಾಜಿ ಹೇಳುತ್ತಾಳೆ.

ಇಲ್ಲಿ, ಅಣ್ಣಂದಿರು ಅಪ್ಪನಿಗೆ ಸಹಾಯ ಮಾಡವುದಿಲ್ಲ. ಮಾತ್ರವಲ್ಲ ಯಾವ ಕೆಲಸವನ್ನೂ ಮಾಡುವುದಿಲ್ಲ. ನಾನು ಮನೆ ಮುಟ್ಟಿದರೆ ಅವರಿಗೆ ತಿಳಿಸುವೆನು. ಆಂಟಿಯೂ ತಿಳಿಸಬೇಕು. ಚಿಕ್ಕಪುಟ್ಟ ಕೆಲಸಗಳನ್ನು ಮಾಡಲು ಅವರಿಗೆ ವಿಪರೀತ ಆಲಸಿಕೆ. ಅವರ ಬಟ್ಟೆಗಳನ್ನು ಸಹ ಅವರು ಬಗೆಯುವುದಿಲ್ಲ. ಅವನ್ನೆಲ್ಲಾ ಅಮ್ಮ ಒಗೆಯುವುದು – ಸಿಂಧು ಹೇಳುತ್ತಾಳೆ.

ಚಿಂತೆಯಿಲ್ಲ. ನಮ್ಮ ಸಂಸ್ಕೃತಿಯೇ ಹೀಗೆ. ಅವರವರಿಗೆ ಸಾಧ್ಯವಿರುವ ಕೆಲಸಗಳನ್ನು ಬಿಡುವಿನ ವೇಳೆಯಲ್ಲಿ ಮಾಡುವ ಒಂದು ಪರಿಶೀಲನವನ್ನು ಮನೆಯಲ್ಲಿಯೂ ಶಾಲೆಯಲ್ಲಿಯೂ ನೀಡಿದರೆ ಮಕ್ಕಳು ಚಿಕ್ಕಂದಿನಿಂದಲೇ ಕೆಲಸ ಮಾಡಲು ಕಲಿತಾರು. ಒಂದು ಬದಲಾವಣೆಯನ್ನು ಸಮಾಜದಲ್ಲಿ ಮಾಡಲು ಸಾಧ್ಯವಾದೀತು – ರಾಜಿ ಹೇಳುತ್ತಾಳೆ.

ನನಗೆ ಇದೊಂದೂ ತಿಳಿಯದು. ಆಂಟಿ ದೊಡ್ಡವರಲ್ಲವೇ. ನೀವು ಎಲ್ಲರೊಡನೆ ಹೇಳಿದರೆ ಅವರು ಒಪ್ಪಬಹುದು – ಸಿಂಧು ಹೇಳುತ್ತಾಳೆ.



# V

ನಾಲ್ಕೈದು ದಿನಗಳ ಪರಿಚಯ ಮತ್ತು ಉತ್ತಮ ಸ್ವಭಾವದ ಮೂಲಕ ರಾಜಿ ಆಂಟಿ ಸಿಂಧುವಿನ ಪ್ರೀತಿಯ ಆಂಟಿಯಾಗಿ ಬದಲಾದಳು. ಆಂಟಿ ನಾವಿಂದು ರಾಣಿಯ ಮನೆಗೆ ಹೋಗುವ. ರಾಣಿ ಬರಬೇಕೆಂದು ಹೇಳಿದ್ದಾಳೆ. ಇವತ್ತು ರಾಣಿಯ ಮನೆಯಲ್ಲಿ ಯಾರೂ ಇಲ್ಲ. ಅವಳು ಒಬ್ಬಳೆ ಇದ್ದಾಳೆ. ರಾಣಿಯ ಚಿಕ್ಕಮ್ಮ, ಚಿಕ್ಕಪ್ಪ, ಮಕ್ಕಳು ಮದುವೆಗೆ ಹೋಗಿದ್ದಾರೆ. ನಾಳೆಯೇ ಬರಬಹುದು. ಅಜ್ಜ ಮತ್ತು ಅಜ್ಜಿ ಮಾತ್ರ ರಾಣಿಯ ಜೊತೆಗಿದ್ದಾರೆ. ತಾಯಿ ಮತ್ತು ತಂದೆ ದೂರದಲ್ಲಿರುವ ಆ ಹುಡುಗಿಯ ಬಗ್ಗೆ ತಿಳಿದಾಗ ಅವಳಿಗೆ ಸ್ವಲ್ಪ ಸ್ನೇಹ ನೀಡಬೇಕೆಂದು ರಾಜಿಗೆ ತೋರಿತು.

ರಾಜಿ ಮತ್ತು ಸಿಂಧು ಎರಡು ದಿನಗಳಿಗೆ ಬೇಕಾಗುವಷ್ಟು ಬಟ್ಟೆ ತೆಗೆದುಕೊಂಡು ರಾಣಿಯ ಮನೆಗೆ ಹೊರಟರು. ಒಂದೆರಡು ಸಂಬಂಧಿಕರ ಮನೆಗೂ ಹೋಗಲಿಕ್ಕಿದ್ದ ಕಾರಣ ಅವರಿಗೆಲ್ಲ ಕೊಡುವ ಸಾಮಾನುಗಳನ್ನು ತೆಗೆದುಕೊಂಡರು. ರಾಣಿಗೆ ಒಂದು ಪಾರ್ಕರ್ ಪೆನ್ನನ್ನೂ ತೆಗೆದರು. ಸಿಂಧು ಬಹಳ ಸಂತೋಷಗೊಂಡಳು. ತನ್ನ ಗೆಳತಿಗೆ ಆಂಟಿ ಪೆನ್ನು ಕೊಡುವಾಗ ಅದರ ಹಿರಿಮೆ ತನಗೆ ಸಲ್ಲುತ್ತದೆಂದು.

'ಮಕ್ಕಳೇ, ಸಾಧ್ಯವಾದಷ್ಟು ಬೇಗ ವಾಪಾಸು ಬರಬೇಕು. ಇವಳನ್ನು ಪ್ರತ್ಯೇಕ ಗಮನಿಸಬೇಕು. ಹುಡುಗಿ ಮೈ ನೆರೆದಿದ್ದಾಳೆ. ರಾಜಿಯೊಟ್ಟಿಗೆ ಮಾತ್ರ ನಾನು ಹೊರಗೆ ಕಳುಹಿಸುತ್ತಿದ್ದೇನೆ' –ಪಂಕಜ ಹೇಳುತ್ತಾಳೆ.

'ಈ ಅಮ್ಮನ ಒಂದು ವಿಷಯ. ಎಲ್ಲಾ ವಿಷಯಗಳನ್ನು ಕರೆದು ಹೇಳದಿದ್ದರೆ ಅಮ್ಮನಿಗೆ ನಿದ್ರೆ ಬರುವುದಿಲ್ಲ. ನಾನು ಅಮ್ಮನೊಡನೆ ಮಾತನಾಡುವುದಿಲ್ಲ.' ಸಿಂಧು ಮುಖದಲ್ಲಿ ಬೇಸರ ತಾಳುತ್ತಾಳೆ.

ಬಾ ಸಿಂಧು. ಅಮ್ಮ ಸತ್ಯವನ್ನೇ ಅಲ್ಲವೇ ಹೇಳಿದ್ದು. ಹೆಣ್ಣು ಮಕ್ಕಳಿಗೆ ಅವರ ಪ್ರಾಯದ ಬಗ್ಗೆ ತಿಳಿಸಬೇಕಾದುದು ಅಮ್ಮನ ಕರ್ತವ್ಯ. ಒಬ್ಬ ಡಾಕ್ಟರು ಮತ್ತು ಅಮೇರಿಕಾದಲ್ಲಿ ನೆಲೆಸಿದ ನನಗೆ ಇದರ ಬಗ್ಗೆ ಹೆಚ್ಚಿನ ಅನುಭವ ಇದೆ. ಅಕ್ಕ ಹೆದರಬೇಡ. ಸಿಂಧು ನನ್ನೊಂದಿಗೆ ಅಲ್ಲವೇ ಬರುವುದು? ಏನೂ ಹೆದರಬೇಡ. ನಾವು ನಾಡಿದ್ದು ವಾಪಾಸಾಗುವೆವು. ರಾಜಿ ಸಿಂಧುವಿನೊಡನೆ ರಾಣಿಯ ಮನೆಗೆ ಹೊರಟಳು.

ಸಿಂಧುವಿಗೆ ಚಿಕ್ಕಮ್ಮನೊಡನೆ ಬಹಳ ಪ್ರೀತಿಯ ಅನುಭವವಾಯಿತು. ಅಮೇರಿಕಾದಲ್ಲಿ 17 ವರ್ಷಗಳನ್ನು ಕಳೆದ ಚಿಕ್ಕಮ್ಮನಲ್ಲಿ ಸ್ವಲ್ಪವೂ ಅಹಂಭಾವ ಇಲ್ಲದಿರುವುದು ಹೇಗೆಂದು ಸಿಂಧು ಆಲೋಚಿಸುತ್ತಾಳೆ. ಸ್ವಂತವಾಗಿ ಬಟ್ಟೆ ಒಗೆಯುವುದು. ಕೋಣೆಯನ್ನು ಸ್ವಚ್ಛಗೊಳಿಸುವುದು, ಅಡುಗೆ ಕೋಣೆಯಲ್ಲಿ ಅಮ್ಮನಿಗೆ ಸಹಾಯ ಮಾಡುವುದು ಇವೆಲ್ಲ ಅವಳಿಗೆ ಅದ್ಭುತವಾಗಿ ತೋರುತ್ತಿತ್ತು. ಬಿಡುವಿನ ವೇಳೆಯಲ್ಲಿ ಅಮ್ಮನಿಗೆ ಸಾಕಷ್ಟು ಸಹಾಯ ಮಾಡದ್ದನ್ನು ನೆನೆಸಿದಾಗ ಅವಳಿಗೆ ನಾಚಿಕೆಯಾಯಿತು.

"ಸಿಂಧೂ, ಏನು ಆಲೋಚನೆಯಲ್ಲಿ ಮುಳುಗಿದ್ದಿ?" ರಾಜಿ ಕೇಳುತ್ತಾಳೆ.

"ಏನಿಲ್ಲ ಆಂಟಿ, ನಾವು ರಸ್ತೆಗೆ ಮುಟ್ಟಿದೆವಲ್ಲ. ಬಸ್ಸಿನಲ್ಲಿ ಹೋಗುವುದೋ, ರಿಕ್ಷಾದಲ್ಲೋ?"

ಮೊದಲು ಯಾವುದು ಬರುತ್ತದೆ ಅದರಲ್ಲಿ ಹೋಗೋಣ ಅಲ್ಲವೇ ಸಿಂಧು?

ಸಾಕು ಆಂಟಿ. ಅಮೇರಿಕಾದಲ್ಲೂ ರಸ್ತೆಗಳು ಇದೇ ರೀತಿ ಇವೆಯೇ?

"ಅಲ್ಲ ಸಿಂಧು, ಅಲ್ಲಿ ಬಹಳ ಸ್ವಚ್ಛವಾದ, ಸುಂದರವಾದ ರಸ್ತೆಗಳು. ಧೂಳು ತುಂಬಿದ, ಬಿರುಕು

ಬಿಟ್ಟಿರುವ ರಸ್ತೆಗಳನ್ನು ಎಲ್ಲಿಯೂ ಕಾಣಲು ಸಾಧ್ಯವಿಲ್ಲ. ಅಂಕುಡೊಂಕಾದ ರಸ್ತೆಗಳೂ ಅಲ್ಲಿ ಇಲ್ಲ. ಬದಲಾಗಿ ನೇರವಾದ ರಸ್ತೆಗಳು ಅಲ್ಲವೇ. ನೀನು ಚೆನ್ನಾಗಿ ಓದು. ನಿನ್ನನ್ನು ನಾನು ಅಮೇರಿಕಾಕ್ಕೆ ಕೊಂಡು ಹೋಗುವೆ.

ಅಯ್ಯೋ, ನಾನು ನಿಮ್ಮೊಂದಿಗೆ ಬರುವುದಿಲ್ಲ. ಅಮ್ಮನನ್ನು ಕಾಣದೆ ನನಗೆ ಸಾಧ್ಯವಿಲ್ಲ. ಅದೋ ಬಸ್ಸು ಬಂತು. ಇಬ್ಬರೂ ಬಸ್ಸು ಹತ್ತಿದರು.

## VI

ಬಸ್ ತಂಗುದಾಣದಲ್ಲಿ ಬಸ್ಸಿಳಿದು ರಿಕ್ಷಾದಲ್ಲಿ ರಾಣಿಯ ಮನೆ ಮುಟ್ಟಿದೆವು. ಸಮಯ ಐದು ಗಂಟೆಯಾಗುತ್ತಲಿತ್ತು. ಮಾಳಿಗೆ (ಎರಡಂತಸ್ತಿನ) ಮನೆಯ ಪೋರ್ಟಿಕೋದಲ್ಲಿ ಅವರಿರುವ ರಿಕ್ಷಾ ನಿಲ್ಲಿಸಲಾಯಿತು. ಪ್ರಾಯವಾದ ಮಹಿಳೆ ಬಗ್ಗಿ ನೋಡಿದರು. ಸಿಂಧು ಅವರೊಡನೆ ರಾಣಿ ಇದ್ದಾಳಾ ಎಂದು ಕೇಳಿದಳು.

ಹೌದು ಇದ್ದಾಳೆ ಮಗಳೇ, ಉಳಿದವರೆಲ್ಲಾ ಮದುವೆಗೆ ಹೋಗಿದ್ದಾರೆ. ರಾಣಿ ಹೊಟ್ಟೆನೋವೆಂದು ಮಲಗಿದ್ದಾಳೆ. ಆಗ ರಾಣಿಗೆ ನೀವು ಅವರೊಡನೆ ನೀವು ರಾಣಿಯ ಅಜ್ಜಿಯೋ ಎನ್ನುತ್ತಾಳೆ.

ಹೌದು ಮಗಳೇ, ನಾನು ಮತ್ತು ರಾಣಿ ಮಾತ್ರ ಇಲ್ಲಿದ್ದೇವೆ. ಅವಳ ಗೆಳತಿ ಮತ್ತು ಆಂಟಿ ಬರುತ್ತಾಳೆಂದು ಹೇಳಿದ್ದಾಳೆ. ಒಳಗೆ ಬನ್ನಿ. ರಾಣಿ, ನಿನ್ನ ಗೆಳತಿ ಬಂದಿದ್ದಾಳೆ, ನೋಡು–ಅಜ್ಜಿ ಕೂಗಿ ಹೇಳುತ್ತಾಳೆ. ಹಾಯ್, ಸಿಂಧು, ಆಂಟಿ ಇತ್ತ ಬನ್ನಿ. ರಾಣಿ ಓಡಿ ಬರುತ್ತಾಳೆ. ನಿನಗೇನಾಗಿದೆ? ಅಸೌಖ್ಯವೇ? ನನ್ನ ಆಂಟಿ ಡಾಕ್ಟರು. ನಿನ್ನ ಅಸೌಖ್ಯವನ್ನೆಲ್ಲಾ ದೂರ ಮಾಡಬಲ್ಲರು ಸಿಂಧು ಹೇಳುತ್ತಾಳೆ.

ರಾಣಿ ಸುಂದರವಾಗಿದ್ದೀಯಲ್ಲಾ. ಏನು ತೊಂದರೆ? ಆಂಟಿ ಕೇಳುತ್ತಾಳೆ.

ಏನಿಲ್ಲ, ಆಂಟಿಯನ್ನೂ ಸಿಂಧುವನ್ನೂ ಕಂಡಾಗಲೇ ಅಸೌಖ್ಯವೆಲ್ಲಾ ಹೋಯಿತು. ಬನ್ನಿ ಆಂಟಿ, ನನ್ನ ಕೋಣೆಯಲ್ಲಿ ಕುಳಿತುಕೊಳ್ಳೋಣ. ಅಜ್ಜೀ ನಾವಿಲ್ಲಿದ್ದೇವೆ–ರಾಣಿ ಕರೆದು ಹೇಳಿದಳು. ನಾನೂ ಅಜ್ಜಿಯೂ ಕೆಲಸದ ಅಕ್ಕನೂ ಮಾತ್ರ ಇಲ್ಲಿದ್ದೇವೆ. ಇವತ್ತು ನಾವೆಲ್ಲ ಇಲ್ಲಿ ನಿಲ್ಲುವ. ನಾಳೆ ನಿಮಗೆ ವಾಪಸಾಗಬಹುದು. ಸಿಂಧುವಿಗೆ ಬದಲಾಯಿಸಲು ನನ್ನ ಬಟ್ಟೆಗಳನ್ನು ಕೊಡುವೆ. ಆಂಟಿಗೆ ಅಮ್ಮನ ಸಾರಿ ಕೊಡುವೆ. ರಾಣಿ ಕಪಾಟು ತೆರೆದು ತೋರಿಸಿದಳು.

‘ಬೇಡ ರಾಣಿ, ನಮಗೆ ಕೆಲವು ಸಂಬಂಧಿಕರ ಮನೆಗೆ ಹೋಗಲಿಕ್ಕೆ ಇದೆ. ನಿನಗೆ ಮನಸ್ಸಿರುವ ಕಾರಣ ನಾವು ಇಲ್ಲಿ ರಾತ್ರಿ ನಿಲ್ಲುವ. ಸಂತೋಷವಾಯಿತೆ?’ ರಾಜಿ ಹೇಳುತ್ತಾಳೆ.

**Thank You** ಆಂಟಿ – ರಾಣಿ ಹೇಳುತ್ತಾಳೆ.

ಏನು ನಿನ್ನ ಅಸೌಖ್ಯ. ಆಂಟಿ ಮದ್ದು ಕೊಡುವರು.

ಇಲ್ಲಪ್ಪ ನನಗೇನೂ ಕಾಯಿಲೆ ಇಲ್ಲ. ಅಜ್ಜಿ ಸುಮ್ಮನೆ ಹೇಳಿದ್ದು.

ಅದೇನಿಲ್ಲ. ಮದುವೆಗೆ ಕರೆದುಕೊಂಡು ಹೋಗದ್ದರ ಬೇಸರವೇ? ಸಿಂಧು ಕೇಳುತ್ತಾಳೆ.

ಅದೇನಿಲ್ಲ ಆಂಟಿ, ಮೂರು ನಾಲ್ಕು ತಿಂಗಳಾಯಿತು. ತಿಂಗಳಿನಲ್ಲಿ ಮೂರು ನಾಲ್ಕು ದಿನ ಭಯಂಕರ ಹೊಟ್ಟೆನೋವು ಬರುತ್ತದೆ. ಅದರ ನಂತರ ಅಯ್ಯೋ ನನಗೆ ಹೇಳಲು ನಾಚಿಕೆಯಾಗುತ್ತದೆ. ಅವಳು ಮುಖ ಮುಚ್ಚುತ್ತಾಳೆ.

ಓ, ಅದೋ ವಿಷಯ. ಅದಕ್ಕೇಕೆ ನಾಚಿಕೆ? ಮೆನ್ಸಸ್ ಆರಂಭವಾಗುವುದರ ಮೊದಲಲ್ಲವೇ,



ಆಂಟಿ ಕೇಳುತ್ತಾಳೆ.

ಹೌದು, ಶರೀರದಿಂದ ಎಷ್ಟು ರಕ್ತ ಹೋಗುತ್ತದೆ? ಅಷ್ಟು ರಕ್ತ ಆಗಲು ಎಷ್ಟು ದಿನಗಳಾಗಬೇಕು? ಅಷ್ಟು ದಿವಸವೂ ದೇಹ ಅಶುದ್ಧವಲ್ಲವೇ ಎಂಬ ವಿಚಾರವೇ ಬೇಸರ ತರಿಸುತ್ತದೆ–ರಾಣಿ ಹೇಳಿದಳು.

ಹೌದಾ, ಯಾರು ಈ ವಿಷಯವನ್ನು ರಾಣಿಗೆ ತಿಳಿಸಿದ್ದು? ಆಂಟಿ ಕೇಳುತ್ತಾಳೆ.

ರಾಣಿ, ಕಾಫಿ ರೆಡಿ. ಎಲ್ಲರೂ ಕಾಫಿ ಕುಡಿಯಿರಿ. ಕೆಲಸದಾಕೆ ಕರೆಯುತ್ತಾರೆ.

ಬನ್ನಿ ಆಂಟಿ, ಸಿಂಧು ಕಾಫಿ ಕುಡಿಯೋಣ. ರಾಣಿ ಅವರೊಂದಿಗೆ ಅಡುಗೆ ಮನೆಗೆ ನಡೆದಳು.

ಮೇಜಿನ ತುಂಬೆಲ್ಲಾ ಬಗೆ ಬಗೆ ತಿಂಡಿಗಳು. ರಾಣಿ, ನೀನು ಬೇಕರಿ ಇಲ್ಲಿ ತಂದಿದ್ದೀಯಾ- ಸಿಂಧು ಕೇಳುತ್ತಾಳೆ.

ಅಲ್ಲ ಸಿಂಧು, ಮದುವೆಗೆ ಹೋದಾಗ ಮಾಡಿದ ಮತ್ತು ಕೊಂಡ ತಿಂಡಿಗಳನ್ನು ಸ್ವಲ್ಪ ತೆಗೆದಿರಿಸಿದ್ದೆ.

ನಾನು ಹೆಚ್ಚಾಗಿ ಇಂತಹ ತಿಂಡಿಗಳನ್ನು ತಿನ್ನಲಿಕ್ಕಿಲ್ಲ. ಒಬ್ಬಳೇ ತಿನ್ನಲು ಇಷ್ಟವಾಗುವುದಿಲ್ಲ. ರಾಣಿ ಆತ್ಮಕಥೆಯೆಂಬಂತೆ ಹೇಳಿದಳು.

ನಾನು ದೊಡ್ಡವಳಾದ ಕಾರಣ ಈಗ ಯಾರೊಡನೆಯೂ ಮಾತನಾಡುವ ಹಾಗಿಲ್ಲ. ಯಾರನ್ನೂ ಕಾಣಲು ಬಾರದು. ಈಗ ನಾನು ಒಬ್ಬಂಟಿಯಾದೆ. ರಾಣಿ ದುಃಖದಿಂದ ಹೇಳಿದಳು.

ಅದೇಕೆ ರಾಣಿಗೆ ಹಾಗೆ ತೋರುತ್ತದೆ? ನಿನಗೆ ನಾವೆಲ್ಲ ಇಲ್ಲವೇ? ಚಿಕ್ಕಮ್ಮ ಮತ್ತು ಅಜ್ಜಿ ಇಲ್ಲವೇ? ರಾಜಿ ಕೇಳುತ್ತಾಳೆ.

ಇಲ್ಲ ಆಂಟಿ. ಈಗ ಎಲ್ಲರೂ ನನ್ನನ್ನು ನೋಡುವುದು ಹತ್ತು ಕಣ್ಣುಗಳಿಂದ. ಐದಾರು ತಿಂಗಳಿನ ಮೊದಲಿನವರೆಗೆ ಯಾವ ಸಮಸ್ಯೆಯೂ ಇರಲಿಲ್ಲ. ಈಗ ಸಮಸ್ಯೆ ಶುರುವಾಗಿದೆ. ಈಗ ಯಾರನ್ನೂ ಕಾಣುವುದೂ, ಮಾತನಾಡುವುದೂ ಎಲ್ಲ ತಪ್ಪು. ರಾಣಿ ಮನಸ್ಸು ತೆರೆಯುತ್ತಾಳೆ.

ಅದೇನೂ ಚಿಂತೆಯಿಲ್ಲ. ನೀನು ಕಾಫಿ ಕುಡಿ. ರಾಜಿ ಆಂಟಿ ಸಮಾಧಾನ ಪಡಿಸುತ್ತಾಳೆ.

‘ಮಕ್ಕಳೇ, ಎಲ್ಲವನ್ನೂ ತೆಗೆದುಕೊಳ್ಳಿ, ಇಲ್ಲಿ ತಿನ್ನಲು ಯಾರೂ ಇಲ್ಲ. ರಾಣಿ ಏನನ್ನೂ ತಿನ್ನುವುದಿಲ್ಲ’ ಅಜ್ಜಿ ಹೇಳುತ್ತಾಳೆ. ಅಜ್ಜಿ, ನೀವೂ ಬನ್ನಿ. ನಾವೆಲ್ಲ ಒಟ್ಟಿಗೆ ಕಾಫಿ ಕುಡಿಯೋಣ ರಾಜಿ ಆಂಟಿ ಆಹ್ವಾನಿಸುತ್ತಾಳೆ.

ಈ ಮುದಿಪ್ರಾಯದಲ್ಲಿ ಇದನ್ನೆಲ್ಲ ತಿನ್ನಲಿಕ್ಕೆ ಸಾಧ್ಯವಿಲ್ಲ. ಹಿಂದಿನ ಕಾಲದಲ್ಲಿ ಈ ತಿಂಡಿಗಳ ಸ್ಥಾನದಲ್ಲಿ ಸುವರ್ಣಗೆಡ್ಡೆ, ಗೆಣಸು ಮುಂತಾದ ಗಡ್ಡೆ ಗೆಣಸುಗಳನ್ನು ಬೇಯಿಸಿ ತಿನ್ನುತ್ತಿದ್ದೆವು. ಈಗ ಅದನ್ನೆಲ್ಲ ನೋಡಲಿಕ್ಕೇ ಇಲ್ಲ – ಅಜ್ಜಿ ಹೇಳಿದರು.

ನಿನ್ನೆ ಮತ್ತು ಇಂದು ನಾನು ಇದನ್ನೆಲ್ಲ ತಿಂದದ್ದು. ಅಕ್ಕ ತುಂಬಾ ಬಗೆಯ ತಿಂಡಿಗಳನ್ನು ಮಾಡಿಕೊಟ್ಟರು ಆಂಟಿ ಅಂದರು.

ಅದು ಸರಿ. ಇಂತಹ ಮನೆಯಲ್ಲಿ ತಯಾರಿಸಿದ ವಸ್ತುಗಳೇ ದೇಹಕ್ಕೆ ಒಳ್ಳೆಯದು. ಈಗಿನ ಬಣ್ಣಬಣ್ಣದ ಸಿಹಿತಿಂಡಿಗಳನ್ನು ಸೇವಿಸುವುದರಿಂದ ರೋಗ ಬರುವ ಸಾಧ್ಯತೆ ಹೆಚ್ಚು. ವೃಥಾ ಖರ್ಚು ಆದೀತು ಅಜ್ಜಿ ಹೇಳಿದರು.

ಅಜ್ಜಿಯ ಸ್ವಭಾವವೇ ಹೀಗೆ. ಬೇಕರಿಯ ಯಾವ ತಿಂಡಿಗಳನ್ನೂ ಅವರು ತಿನ್ನಲಿಕ್ಕಿಲ್ಲ. ಗಂಜಿ ಮತ್ತು ಒಂದು ಪದಾರ್ಥ ಸಾಕು. ತೋಟದಿಂದ ಸ್ವಲ್ಪ ಎಲೆಗಳನ್ನೂ, ಗೆಣಸುಗಳನ್ನೂ ತರುತ್ತಾರೆ.

ಅವುಗಳನ್ನು ಬೇಯಿಸಿ ತಿನ್ನುತ್ತಾರೆ. ಅಜ್ಜಿಗೆ ಯಾವ ರೋಗವೂ ಇಲ್ಲ. ರಾಣಿ ಹೇಳುತ್ತಾಳೆ.

ಕಾಫಿ ಕುಡಿದ ನಂತರ ರಾಣಿಯು ಆಂಟಿಯೊಡನೆ ಕತ್ತಲೆಯಾಗುವುದಕ್ಕೆ ಮೊದಲು ಕೊಳದ ಬಳಿ ಹೋಗೋಣ ಎನ್ನುತ್ತಾಳೆ. ಅಲ್ಲಿ ತುಂಬಾ ಮೀನುಗಳಿವೆ. ಬೇಕಾದರೆ ಅಲ್ಲಿಯೇ ಸ್ನಾನವನ್ನೂ ಮಾಡಬಹುದು.

ಹೌದಾ! ಆಗಬಹುದು. ನಾನು ಕೊಳದಲ್ಲಿ ಸ್ನಾನ ಮಾಡಿ ಬಹಳ ಕಾಲವಾಯಿತು – ಆಂಟಿ ಹೇಳಿದರು.

ಅಯ್ಯೋ, ನಾನು ಬರಲಾರೆ. ಅಲ್ಲಿ ಯಾರಾದರೂ ಪುರುಷರು ಇರಬಹುದು. ನಾನು ಇದುವರೆಗೂ ಸ್ನಾನದ ಕೋಣೆಯಲ್ಲಲ್ಲದೆ ಬೇರೆಲ್ಲೂ ಸ್ನಾನ ಮಾಡಿಲ್ಲ – ಸಿಂಧು ಹೇಳುತ್ತಾಳೆ.

ಇದು ನಮ್ಮ ಸ್ವಂತ ಕೊಳ ಇಲ್ಲಿ ಸುತ್ತಲೂ ಗೋಡೆಗಳಿವೆ. ಮಾತ್ರವಲ್ಲ ಬೇರಾರೂ ಇತ್ತ ಬರಲು ಸಾಧ್ಯವಿಲ್ಲ. ಮಾತ್ರವಲ್ಲ ಇಲ್ಲಿ ನಾವು ಮಾತ್ರವೇ ಇರುವುದಲ್ಲಾ? ಮೊದಲೆಲ್ಲಾ ನಾನು ಕೊಳದಲ್ಲಿ ಈಜಿ ಸ್ನಾನ ಮಾಡುತ್ತಿದ್ದೆ. ಆದರೆ ಈಗ ಈಜಲು ಬಿಡುವುದಿಲ್ಲ. ರಾಣಿ ಬೇಸರದಿಂದಿ ನುಡಿದಳು.

ಈಗ ಈಜಲು ಏನು ಬಿಡದ್ದು? ಆಂಟಿ ಕೇಳಿದಳು.

ಈಗ ನಾನು ದೊಡ್ಡವಳಾಗಿದ್ದೇನಲ್ಲಾ; ಇನ್ನು ಮೊದಲಿನಂತೆ ಆಗದು ಎಂದು ಚಿಕ್ಕಮ್ಮನ ಅಪ್ಪಣೆ. ಆದರೆ ನಾನು ಇಂದು ಆ ಆದೇಶವನ್ನು ಮುರಿಯುತ್ತೇನೆ. ಅಲ್ಲವೇ ಆಂಟಿ, ರಾಣಿ ಕೇಳುತ್ತಾಳೆ.

ಹೌದು ಮಗಳೇ. ನಾವು ಹೋಗೋಣ.

ಕೊಳದ ಬದಿಯಲ್ಲಿ ನಡೆಯುತ್ತಿದ್ದ ರಾಣಿ ಸಂಪೂರ್ಣ ಬದಲಾಗಿದ್ದಳು. ಆಂಟಿಯ ಕೈ ಹಿಡಿದು ನಡೆಯುತ್ತಿದ್ದ ಆ ಭಂಗಿ ಸಿಂಧುವಿಗೆ ಆಶ್ಚರ್ಯ ಉಂಟುಮಾಡಿತು. ಪ್ರತಿಯೊಂದು ಮರವನ್ನೂ ತೋರಿಸಿ ಅದು ಯಾವುದೆಂದು ವಿವರಿಸುತ್ತಿದ್ದ ರೀತಿಯನ್ನು ಕಂಡು ರಾಣಿ ಬದಲಾಗಿದ್ದಾಳೆಂದು ಸಿಂಧು ಅರ್ಥ ಮಾಡಿಕೊಂಡಳು.

## VII

ಆಂಟಿ, ನನಗೆ ಕೆಲವೊಂದು ಸಂದೇಹಗಳಿವೆ. ಆಂಟಿ ಬೇರೆಯವರೊಡನೆ ಇದನ್ನು ಹೇಳಬಾರದು. ತಮಾಷೆ ಮಾಡಬಾರದು – ರಾಣಿ ಹೇಳಿದಳು. ಇಲ್ಲ, ನಿನ್ನ ಸಂದೇಹಗಳನ್ನು ಕೇಳು ಮಗಳೇ. ಊಟದ ನಂತರ ಟಿ.ವಿ. ನೋಡುತ್ತಾ ಇದ್ದಾಗ ರಾಜಿ ಹೇಳಿದಳು.

ಇವಳ ಸಂದೇಹಗಳೇ, ಆಂಟಿ, ಇವಳಿಗೆ ಅನೇಕ ಸಂದೇಹಗಳು. ನಾನು ಮಲಗುತ್ತೇನೆ, ಸಿಂಧು ಅಂದಳು. ನೀನೇಕೆ ಮಲಗುತ್ತಿ? ನೀನು ಕೂಡಾ ತಿಳಿಯಬೇಕಾದ ವಿಷಯಗಳೇ. ಆಂಟಿ ಸರಿಯಾದ ಉತ್ತರವನ್ನು ತಿಳಿಸುವರು ರಾಣಿ ಹೇಳುತ್ತಾಳೆ.

ನೀನು ಕೇಳು ಸಿಂಧು, ನೀನೂ ಆಲಿಸು ಎನ್ನುತ್ತಾ ಆಂಟಿ ರಾಣಿಯ ಬಳಿ ಕುಳಿತುಕೊಳ್ಳುತ್ತಾಳೆ.

ಆಂಟಿ, ನಾನು ಹೊರಗೆ ಹೋಗಬಾರದೆಂದೂ, ಉಳಿದವರೊಂದಿಗೆ ಮಾತನಾಡಬಾರದೆಂದೂ ಚಿಕ್ಕಪ್ಪ ಮತ್ತು ಚಿಕ್ಕಮ್ಮ ಯಾಕೆ ಹೇಳುತ್ತಾರೆ?

ಹುಡುಗಿಯರು ಪ್ರಾಯಪೂರ್ತಿಯಾದಾಗ ನಮ್ಮ ಈ ಪ್ರದೇಶದಲ್ಲಿ ತಂದೆ ತಾಯಂದಿರು ಕೆಲವೊಂದು ಕಡಿವಾಣಗಳನ್ನು ಹಾಕುತ್ತಾರೆ. ಒಬ್ಬಳೇ ಹೊರಗಡೆ ನಡೆಯಬಾರದು, ಯುವಕರೊಂದಿಗೆ



ಮಾತನಾಡಬಾರದು–ಮೊದಲಾದವುಗಳನ್ನು. ಈ ಪ್ರಾಯದಲ್ಲಿ ಹುಡುಗಿಯರಿಗೂ, ಹುಡುಗರಿಗೂ ಪರಸ್ಪರ ಮಾತನಾಡಬೇಕೆಂದೂ, ತಮ್ಮ ಸಾಮರ್ಥ್ಯಗಳನ್ನು ಉಳಿದವರಿಗೆ ತೋರಿಸಬೇಕೆಂದೂ ತೋರುವ ಪ್ರಾಯ. ಈ ಸಮಯದಲ್ಲಿ ನಿಯಂತ್ರಣ ಮಾಡಿದಾಗ ಮನಕ್ಲೇಶಕ್ಕೂ, ರೋಗಗಳಿಗೂ ಕಾರಣವಾಗುತ್ತದೆ.

### *ಹುಡುಗಿಯರನ್ನು ಈ ಪ್ರಾಯದಲ್ಲಿ ನಿಯಂತ್ರಿಬೇಕಾದ ಅಗತ್ಯವಿದೆಯೇ ?*

ಹುಡುಗಿ ತಾಯಿಯಾಗಲು ಸಿದ್ಧವಾದಳು ಎಂಬುದರ ಪ್ರಮಾಣವೇ ಋತುಸ್ರಾವ ಅಥವಾ ಮೆನ್ಸಸ್. ಗರ್ಭ ಧರಿಸಲು ಅಂದರೆ ಪುರುಷ ಮತ್ತು ಮಹಿಳೆ ಶಾರೀರಿಕ ಸಂಬಂಧವೇರ್ಪಡಲೂ, ಗರ್ಭಿಣಿಯಾಗಿ ಸಮಾಜದ ಅಭಿವೃದ್ಧಿಗೆ ಬೇಕಾಗಿ ಹುಡುಗಿ ತಯಾರಾದಳು ಎಂದು ತಿಳಿಸುವ ಸಮಯವಾಗಿದೆ. ಈ ಸಮಯದಲ್ಲಿ ಪುರುಷ ಮತ್ತು ಮಹಿಳೆಯರ ನಡುವೆ ಒಂದು ರೀತಿಯ ಆಕರ್ಷಣೆ ಮೂಡುತ್ತದೆ. ಸರಿ ಯಾವುದು, ತಪ್ಪು ಯಾವುದು ಎಂದು ಅರ್ಥವಾಗದೇ ಹೋಗುತ್ತದೆ. ಹಾಗಾಗಿ ತಪ್ಪುಗಳು ಸಂಭವಿಸುವ ಸಾಧ್ಯತೆ ಇದೆ. ಹೀಗಾಗಿ ಹುಡುಗಿಯರ ಮೇಲೆ ಒಮ್ಮೆಲೇ ನಿಯಂತ್ರಣವನ್ನು ಹಾಕುತ್ತಾರೆ. ಇದು ಹುಡುಗಿಯರ ಒಳಿತನ್ನು ಭಾವಿಸುವುದರಿಂದ ಮಾತ್ರವಾಗಿದೆ. ಬದಲಾಗಿ ಹುಡುಗಿಯರನ್ನು ತಂದೆ ತಾಯಿಯರು ದ್ವೇಷಿಸುವುದರಿಂದ ಖಂಡಿತಾ ಅಲ್ಲ.

### *ಋತುಸ್ರಾವ ಆರಂಭವಾಗುವುದರ ಮೊದಲು ಶಾರೀರಿಕ ಸಂಬಂಧ ನಡೆಸಬಾರದೇ?*

ಒಬ್ಬಳು ಹುಡುಗಿ ಒಂಭತ್ತು ವಯಸ್ಸಾಗುವಾಗಲೇ ಅವಳು ಗಂಡಸರನ್ನು ಸ್ವೀಕರಿಸಲೂ ಶಾರೀರಿಕ ಸಂಬಂಧಗಳನ್ನು ಸ್ಥಾಪಿಸಲೂ ಆಸಕ್ತಿ ಹೊಂದುತ್ತಾಳೆ. ಅನೇಕ ಹುಡುಗಿಯರಿಗೆ ಈ ರೀತಿ ತಪ್ಪು ಸಂಭವಿಸುತ್ತದೆ. ಹೆಚ್ಚಾಗಿ ಇದು ಸಂಬಂಧಿಕರಿಂದಲೇ ಉಂಟಾಗುತ್ತದೆ. ನೈತಿಕತೆಯಿಲ್ಲದ ದೇವಭಕ್ತರಲ್ಲದ ಕೆಲವರು ಹುಡುಗಿಯರನ್ನು ತಮ್ಮ ವಿಕಾರ ಶಮನಕ್ಕೆ ಬಳಸುತ್ತಾರೆ. ಹುಡುಗಿಗೆ ಏನೂ ಗೊತ್ತಿರುವುದಿಲ್ಲ. ಹುಡುಗಿಯನ್ನು ಸಂತೋಷಗೊಳಿಸುವ ನೆಪದಲ್ಲಿ ಯಾರೊಡನೆಯೂ ಹೇಳಬಾರದೆಂದು ಹುಡುಗಿಗೆ ಬೆಲೆಬಾಳುವ ಉಡುಗೊರೆಗಳನ್ನು ನೀಡಲಾಗುತ್ತದೆ. ಅನೇಕ ಹುಡುಗಿಯರು ಹೆದರಿಕೆ ಮತ್ತು ಸಂಕೋಚದಿಂದ ಈ ವಿಷಯಗಳನ್ನು ಯಾರೊಡನೆಯೂ ಹೇಳುವುದಿಲ್ಲ. ಕೆಲವು ಹುಡುಗಿಯರು ಇದರಿಂದ ದೊರಕುವ ಸಂತೋಷ ಮತ್ತು ಉಡುಗೊರೆಗಳಿಂದ ತೃಪ್ತಿ ಹೊಂದುತ್ತಾರೆ. ಹೀಗಾಗಿ ಎಂಟು, ಒಂಭತ್ತು ವಯಸ್ಸಾಗುವಾಗಲೇ ಹುಡುಗಿಯರಿಗೆ ಈ ವಿಷಯಗಳ ಬಗ್ಗೆ ತಿಳುವಳಿಕೆ ಮಾಡಿಸಬೇಕು. ಹಾಗಾದಾಗ ಮಾತ್ರ ಮಕ್ಕಳು ಉಂಟಾಗಬಹುದಾದ ಅನಾಹುತಗಳಿಂದ ರಕ್ಷಣೆ ಹೊಂದಬಹುದು.

### *ಪ್ರಾಯವಾದವರೊಂದಿಗೆ ಮಕ್ಕಳನ್ನು ಮಲಗಿಸುವುದು ಸರಿಯಲ್ಲವೇ ?*

ಹಿಂದಿನ ಕಾಲದಲ್ಲಿ ಪ್ರಾಯವಾದವರೊಂದಿಗೆ ಮಕ್ಕಳನ್ನು ಮಲಗಲು ಬಿಡುತ್ತಿದ್ದರು. ಮಾವಂದಿರ ಜೊತೆ, ಸಹೋದರರ ಜೊತೆ, ದೊಡ್ಡಮ್ಮ ಮೊದಲಾದವರ ಜೊತೆ ಮಲಗಲು ಬಿಡುತ್ತಿದ್ದರು. ಆದರೆ ಈಗ ಹುಡುಗರನ್ನೂ ಹುಡುಗಿಯರನ್ನೂ ದೈಹಿಕವಾಗಿ ಪೀಡಿಸುತ್ತಿರುವುದಾಗಿ ತಿಳಿದು ಬಂದಿದೆ. ಹೀಗಾಗಿ ಮಕ್ಕಳನ್ನು ಒಬ್ಬರೇ ಇತರ ಮನೆಗಳಿಗೆ ಕಳುಹಿಸಿ ಕೊಡಬಾರದು. ಮನೆಯಲ್ಲಿಯೂ ಕೆಲಸದವರ ಜೊತೆಯೂ ಮಲಗಲು ಬಿಡುವುದು ಒಳ್ಳೆಯದಲ್ಲ. ಇವನ್ನೆಲ್ಲ ನಾವು ಗಮನಿಸಬೇಕಾಗಿದೆ.

### *ಹಾಗಾದರೆ ಒಂದು ಮಗುವಿಗೆ ಚಿಕ್ಕಂದಿನಿಂದಲೇ ಗಮನ ಬೇಕೋ?*

ಖಂಡಿತ. ಏಕೆಂದರೆ ಹುಡುಗಿಗೆ ಪ್ರಾಯಪೂರ್ತಿಯಾದ ನಂತರ ಗಮನಿಸುವ ಎಂಬ ವಿಷಯವನ್ನು ದೊಡ್ಡವರು ಬಿಡಬೇಕು. ಋತುಸ್ರಾವ ಇಲ್ಲ. ಆಗಲಿಲ್ಲ ಎಂಬುದರಿಂದ ಮಾತ್ರ ಹುಡುಗಿಯರು ಶೋಷಣೆಗೆ ಗುರಿಯಾಗುವುದಿಲ್ಲ ಎಂಬುದು ತಪ್ಪು. ಎಂಟು, ಒಂಭತ್ತು ವರ್ಷವಾದ ನಂತರ ಹುಡುಗಿಯರು ಹುಡುಗರೊಡನೆಯೂ, ಹುಡುಗರು ಹುಡುಗಿಯರೊಡನೆಯೂ ಸಲಿಗೆ ತೋರಿಸುತ್ತಾರೆ. ಆದುದರಿಂದ ಹುಡುಗಿಯರನ್ನು ದೊಡ್ಡವರು ತಮ್ಮ ಸ್ವಾರ್ಥಕ್ಕೆ ಬಳಸುವುದನ್ನು ತಡೆಯಬೇಕಾದರೆ ಚಿಕ್ಕಂದಿನಿಂದಲೇ ತಿಳುವಳಿಕೆ ಮೂಡಿಸುವ ಪ್ರಯತ್ನವಾಗಬೇಕು.

### *ಮಕ್ಕಳಿಗೆ ಲೈಂಗಿಕ ಶಿಕ್ಷಣವನ್ನು ಯಾವಾಗ ನೀಡಬೇಕು ?*

ಮಕ್ಕಳಿಗೆ ಚಿಕ್ಕಂದಿನಿಂದಲೇ ತಿಳುವಳಿಕೆ ಮೂಡಿಸಲು ಪ್ರಯತ್ನ ಮಾಡಬೇಕು. ಆಡು ಮಗುವನ್ನು ಹೆರುವಾಗ ಅಥವಾ ತನ್ನ ಸಂಗಾತಿಯೊಂದಿಗೆ ಸರಸದಲ್ಲಿರುವಾಗ ಮಕ್ಕಳಲ್ಲಿ ಮೂಡುವ ಜಿಜ್ಞಾಸೆಯನ್ನು ತಣಿಸದೆ, ಸಂತತಿಯ ಉಳಿವಿಗೆ ಇಂತಹ ಕೆಲಸಗಳು ಅಗತ್ಯ. ಹೊಸ ತಲೆಮಾರಿನ ಬೆಳವಣಿಗೆಗೆ ಮಕ್ಕಳ ಜನನ ಅನಿವಾರ್ಯ ಎಂಬ ಬಗ್ಗೆ ವಿವರಿಸಬೇಕು. ಮನೆಯಲ್ಲಿ ತಮ್ಮನೋ ತಂಗಿಯೋ ಆಗುವಾಗ ನಿನಗೆ ಈಗ ಏನೂ ತಿಳಿಯಬೇಕಾದ ಅಗತ್ಯವಿಲ್ಲ ಎಂದು ಅವರ ಸಂಶಯಗಳಿಗೆ ನೀರು ಹಾಕಿ ನಂದಿಸುವ ಬದಲಿಗೆ ಮಾನವ ಕುಲದ ಉಳಿವು, ಕೌಟುಂಬಿಕ ಜೀವನ, ವೈವಾಹಿಕ ಜೀವನ – ಈ ಬಗ್ಗೆ ಸ್ವಲ್ಪ ಮಟ್ಟಿಗೆ ವಿಷಯಗಳನ್ನು ತಿಳಿಸಬೇಕು.

### *ಮಕ್ಕಳಿಗೆ ಈ ರೀತಿಯ ಲೈಂಗಿಕ ತಿಳುವಳಿಕೆಯನ್ನು ಯಾರು ನೀಡಬೇಕು ?*

ತಂದೆ ಮತ್ತು ತಾಯಿಗೆ ಈ ಬಗ್ಗೆ ಮುಖ್ಯವಾದ ಪಾತ್ರವಿದೆ. ಮಗನಿಗೂ, ಮಗಳಿಗೂ ಈ ಬಗ್ಗೆ ತಿಳುವಳಿಕೆ ನೀಡಬಹುದು. ಮಗ ಅಥವಾ ಮಗಳೆಂಬ ಭೇದ ಅಗತ್ಯವಿಲ್ಲ. ಗೆಳೆಯರು, ಪುಸ್ತಕಗಳು, ಕೆಲಸದವರು–ಮೊದಲಾದವರಿಂದ ಮಕ್ಕಳಿಗೆ ದೊರೆಯುವ ಮಾಹಿತಿಗಳು ಸತ್ಯವಾಗಿರಬೇಕೆಂದೇನೂ ಇಲ್ಲ. ಮಾತ್ರವಲ್ಲ ಈ ಬಗ್ಗೆ ಜಿಜ್ಞಾಸೆ ಮೂಡಿಸಲೂ, ಅನೈತಿಕ ಸಂಬಂಧಗಳಿಗೂ ಇದು ದಾರಿ ಮಾಡಬಹುದು. ಆದುದರಿಂದ ಈ ಬಗ್ಗೆ ಸರಿಯಾದ ತಿಳುವಳಿಕೆಯನ್ನು ತಂದೆ ತಾಯಿಯರೇ ನೀಡಬೇಕು. ಮಾತ್ರವಲ್ಲ ತರಬೇತಿ ದೊರೆತ ಸ್ವಯಂಸೇವಕರೂ, ಅಧ್ಯಾಪಕರೂ, ಡಾಕ್ಟರ್, ನರ್ಸ್– ಮೊದಲಾದವರೂ ತಿಳುವಳಿಕೆ ನೀಡಬಹುದು.

### *ಕೌಮಾರ ಪ್ರಾಯ ಎಂದರೇನು ?*

ಒಂದು ಮಗುವು ಪ್ರಾಯಪೂರ್ತಿಯಾದ ಯುವಕ ಅಥವಾ ಯುವತಿಯಾಗಿ ಬದಲಾಗುವ ಸಮಯವೇ ಕೌಮಾರ ಪ್ರಾಯ. ಬಹಳ ವೇಗವಾಗಿ ದೈಹಿಕ ಬದಲಾವಣೆ ಹಾಗೂ ಮಾನಸಿಕ ಬದಲಾವಣೆಗಳು ನಡೆಯುವ ಸಮಯವಾಗಿದೆ ಇದು. ಶರೀರದ ಬೆಳವಣಿಗೆಯೊಂದಿಗೆ ಸ್ವತಃ ಕೆಲಸಗಲನ್ನು ಮಾಡುವ ಮಾನಸಿಕ ಬೆಳವಣಿಗೆಯೂ ಉಂಟಾಗುತ್ತದೆ.

### *ಕೌಮಾರ ಪ್ರಾಯವು ಯಾವ ಪ್ರಾಯದಿಂದ ಯಾವ ಪ್ರಾಯದವರೆಗೆ ?*

ಕೌಮಾರ ಪ್ರಾಯವು 12 ರಿಂದ 19 ವಯಸ್ಸಿನವರೆಗಿನ ಪ್ರಾಯವಾಗಿದೆ.

### *ಕೌಮಾರ ಪ್ರಾಯದಲ್ಲಿ ಯಾವ ಯಾವ ಬದಲಾವಣೆಗಳು ಮಕ್ಕಳಲ್ಲಿ ಉಂಟಾಗುತ್ತದೆ ?*

ಕೌಮಾರ ಪ್ರಾಯದಲ್ಲಿ ದೇಹದ ಭಾಗಗಳು ಪಕ್ಕನೆ ಬೆಳವಣಿಗೆಯಾಗುತ್ತದೆ. ಮಾತ್ರವಲ್ಲ ತಂದೆ



ತಾಯಿಯ ಸಹಾಯವಿಲ್ಲದೆ ಸ್ವಂತವಾಗಿ ಕೆಲಸಗಳನ್ನು ಮಾಡಲೂ ಅದನ್ನು ಕಾರ್ಯಗತಗೊಳಿಸುವ ಹುಮ್ಮಸ್ಸು ಇರುತ್ತದೆ.

### *ಕೌಮಾರ ಪ್ರಾಯದಲ್ಲಿ ಮಕ್ಕಳಲ್ಲಿ ದೇಹದಲ್ಲಿ ಯಾವ ಬದಲಾವಣೆಗಳು ಉಂಟಾಗುತ್ತದೆ ?*

ಹಾರ್ಮೋನುಗಳು ಹೆಚ್ಚಾಗಿ ಉತ್ಪಾದನೆಯಾಗುವುದರ ಫಲವಾಗಿ ಪಕ್ಕನೆ ಕೌಮಾರ ಪ್ರಾಯದಲ್ಲಿ ಮಕ್ಕಳ ದೇಹದಲ್ಲಿ ಬದಲಾವಣೆಗಳು ಉಂಟಾಗುತ್ತದೆ. ಈ ಸಮಯದಲ್ಲಿ ಹುಡುಗರಲ್ಲಿಯೂ, ಹುಡುಗಿಯರಲ್ಲಿಯೂ ಲೈಂಗಿಕ ಸಾಮರ್ಥ್ಯ ಉಂಟಾಗುತ್ತದೆ.

### *ಕೌಮಾರ ಪ್ರಾಯದಲ್ಲಿ ಹುಡುಗರಲ್ಲಿಯೋ ಹುಡುಗಿಯರಲ್ಲಿಯೋ ದೇಹದ ಬೆಳವಣಿಗೆ ಪಕ್ಕನೆ ಕಾಣುತ್ತದೆ ?*

ಖಂಡಿತವಾಗಿಯೂ ಹುಡುಗಿಯರಲ್ಲಿ 10 ರಿಂದ 14 ವರ್ಷದವರೆಗೆ ಹುಡುಗಿಯರು ಪಕ್ಕನೆ ಬೆಳೆಯುತ್ತಾರೆ. ಈ ಪ್ರಾಯದ ಹುಡುಗರಿಗಿಂತ ಹುಡುಗಿಯರು ಬೆಳವಣಿಗೆಯಲ್ಲಿ ದೊಡ್ಡದಾಗಿ ಕಾಣುತ್ತಾರೆ. ಆದರೆ 2 ವರ್ಷ ಕಳೆದ ನಂತರ ಗಂಡು ಮಕ್ಕಳು ಪಕ್ಕನೆ ವೇಗವಾಗಿ ಬೆಳೆಯುತ್ತಾರೆ. ಮಾತ್ರವಲ್ಲ ಆ ಸಮಯದಲ್ಲಿ ಹುಡುಗಿಯರಿಗಿಂತ ಹೆಚ್ಚು ದೊಡ್ಡದಾಗಿ ಕಾಣುತ್ತಾರೆ.

### *ಕೌಮಾರ ಪ್ರಾಯದಲ್ಲಿ ಮೊಡವೆಗಳು ಯಾಕೆ ಉಂಟಾಗುತ್ತವೆ ?*

ಕೌಮಾರ ಪ್ರಾಯದಲ್ಲಿ ಚರ್ಮದ ಗ್ರಂಥಿಗಳು ಹೆಚ್ಚು ಕಾರ್ಯ ಪ್ರವೃತ್ತವಾಗುತ್ತವೆ. ಮಾತ್ರವಲ್ಲ ಚರ್ಮದ ದ್ವಾರಗಳು ದೊಡ್ಡದಾಗುತ್ತವೆ ಮತ್ತು ಹೆಚ್ಚಾಗಿ ಎಣ್ಣೆ ಉತ್ಪಾದನೆಯಾಗುತ್ತದೆ. ಈ ಸಮಯದಲ್ಲಿ ಗ್ರಂಥಿಗಳಿಗೆ ಸೇರುವ ಧೂಳಿನ ಕಣ, ಕೊಳೆ, ಎಣ್ಣೆಯ ಅಂಶಗಳೆಲ್ಲಾ ಸೇರಿ ರೋಮಕೂಪಗಳು ಮುಚ್ಚಿ ಹೋಗುತ್ತವೆ. ಇದರಿಂದಾಗಿ ದ್ವಾರಗಳು ದೊಡ್ಡದಾಗಿ ರೋಗಾಣುಗಳ ಆಕ್ರಮಣದಿಂದ ಮೊಡವೆಗಳು ಉತ್ಪತ್ತಿಯಾಗುತ್ತವೆ.

### *ಕೌಮಾರ ಪ್ರಾಯದಲ್ಲಿ ಉಂಟಾಗುವ ಮೊಡವೆಗಳನ್ನು ಚಿವುಟಲು ಅಥವಾ ಒಡೆಯಲು ಶ್ರಮಿಸುವುದೇಕೆ ?*

ಕೌಮಾರ ಪ್ರಾಯದ ಹುಡುಗರಿಗೂ, ಹುಡುಗಿಯರಿಗೂ ತಮ್ಮ ದೇಹದ ಬಗ್ಗೆ ಅತೀವ ಕಾಳಜಿ ಇರುತ್ತದೆ. ಯಾವಾಗಲೂ ಶರೀರವನ್ನು ಶುಚಿಯಾಗಿಯೂ ಅಂದವಾಗಿಯೂ ಕಾಪಾಡಲು ಅವರು ಬಯಸುತ್ತಾರೆ. ಹಾಗಾಗಿ ಮುಖದ ಮೇಲೆ ಬರುವ ಯಾವುದನ್ನೂ ಚಿವುಟಿ ಹಾಕಲು ಪ್ರಯತ್ನ ಪಡುತ್ತಾರೆ. ಆದರೆ ಹೀಗೆ ಮಾಡುವುದರಿಂದ ಮೊಡವೆಗಳು ಹರಡಲೂ, ಗಾಯವಾಗಿ ದೊಡ್ಡದಾಗಲೂ ಕಾರಣವಾಗುತ್ತವೆ. ಆದುದರಿಂದ ಮೊಡವೆಗಳು ಬಂದರೆ ಬೇಸರ ಪಡುವ ಅಗತ್ಯವಿಲ್ಲ. ಇದರಿಂದಾಗಿ ಮುಖಕಾಂತಿ ಕಡಿಮೆಯಾಗುವುದಿಲ್ಲವೆಂದೂ ಸ್ವಲ್ಪ ಸಮಯದ ನಂತರ ಅದು ತಾನಾಗಿಯೇ ಕಡಿಮೆಯಾಗುವುದೆಂದೂ ಅರ್ಥಮಾಡಿಕೊಳ್ಳಬೇಕು.

### *ಕೌಮಾರ ಪ್ರಾಯದಲ್ಲಿ ಕಂಕುಳ ಬೆವರುವುದಕ್ಕೆ ಕಾರಣವೇನು ?*

ಇದು ಕೂಡಾ ಹಾರ್ಮೋನಿನ ಚಟುವಟಿಕೆಯಿಂದಾಗಿದೆ. ಕಂಕುಳ, ಮುಖ ಮೊದಲಾದವುಗಳನ್ನು ಚೆನ್ನಾಗಿ ಸಾಬೂನಿನ ನೀರಿನಿಂದ ತೊಳೆಯಬೇಕು. ಇದರಿಂದ ಬೆವರುವಿಕೆ, ತುರಿಸುವಿಕೆ ಮೊದಲಾದವು ಉಂಟಾಗುವುದಿಲ್ಲ. ಬೆವರುವುದು ಒಂದು ರೋಗವೂ ಅಲ್ಲ.

*ಕೌಮಾರ ಪ್ರಾಯದಲ್ಲಿ ಲೈಂಗಿಕ ಬೆಳವಣಿಗೆ ಉಂಟಾಗುತ್ತದೆಯೇ ?*

ಹೌದು. ಗಂಡು ಮಕ್ಕಳಲ್ಲಿ 12 ರಿಂದ 14 ವರ್ಷದವರೆಗೂ ಹುಡುಗಿಯರಲ್ಲಿ 8 ರಿಂದ 13 ವರ್ಷದವರೆಗೂ ಲೈಂಗಿಕ ಬೆಳವಣಿಗೆ ಉಂಟಾಗುತ್ತದೆ.

*ಹುಡುಗಿಯರಲ್ಲಿ ಲೈಂಗಿಕ ಬೆಳವಣಿಗೆ ಹೇಗೆ ತಿಳಿಯಬಹುದು ?*

ಹುಡುಗಿಯರಲ್ಲಿ 8 ವಯಸ್ಸಿನ ನಂತರ ದೇಹದಲ್ಲಿ ಬದಲಾವಣೆಗಳನ್ನು ಕಾಣಬಹುದು. ಸ್ತನಗಳ ಬೆಳವಣಿಗೆ ಮೊದಲಿನ ಲಕ್ಷಣ. ಯೋನಿಯ ಸುತ್ತಲೂ ರೋಮಗಳು ಬೆಳೆಯುತ್ತವೆ. ಈ ಸಮಯದಲ್ಲಿ ಯೋನಿ ನಾಳ ಮತ್ತು ಗರ್ಭಪಾತ್ರ ಬೆಳೆಯುತ್ತವೆ. ಹೀಗೆ ಮುಂದುವರಿದು 10 ರಿಂದ 14 ವರ್ಷದೊಳಗೆ ಮೊದಲಿನ ಋತುಸ್ರಾವ ಉಂಟಾಗುತ್ತದೆ.

*ಹದಿನಾಲ್ಕು ವಯಸ್ಸಿನೊಳಗೆ ಸ್ತನಗಳು ಬೆಳವಣಿಗೆಯಾದಿದ್ದರೆ ಅದು ರೋಗವೇ ?*

ಅಲ್ಲ. ಎಲ್ಲರಲ್ಲೂ ಶರೀರದ ಬೆಳವಣಿಗೆ ಒಂದೇ ರೀತಿಯಾಗಿರಬೇಕಿಲ್ಲ. ಆಹಾರ ಕ್ರಮ, ಆರೋಗ್ಯ ಶರೀರ ರೀತಿ ಮೊದಲಾದವುಗಳಿಗೆ ಅನುಸಾರವಾಗಿ ಬೆಳವಣಿಗೆ ತೋರಬಹುದು. ಇದನ್ನೇ ಭಾವಿಸಿ ಚಿಂತಿತರಾಗಬೇಕಾದ ಅಗತ್ಯವಿಲ್ಲ. ಕೆಲವರಲ್ಲಿ 18 ರಿಂದ ಇಪ್ಪತ್ತು ವಯಸ್ಸಾಗುವಾಗಲೇ ಸ್ತನಗಳು ಸರಿಯಾಗಿ ಬೆಳವಣಿಗೆಯಾಗುತ್ತವೆ.

*ಹದಿನಾಲ್ಕು ವಯಸ್ಸಿನೊಳಗೆ ಋತುಸ್ರಾವ ಆಗದಿದ್ದರೆ ಅದು ಒಂದು ರೋಗವೇ ?*

ಇದು ಒಂದು ರೋಗವಲ್ಲ. ಶರೀರದ ಹಾರ್ಮೋನುಗಳ ಏರಿಳಿತಗಳಿಂದಾಗಿಯೂ ದೈಹಿಕ ಮಾನಸಿಕ ತೊಂದರೆಗಳಿಂದಾಗಿಯೂ ಇದು ಉಂಟಾಗುತ್ತದೆ. ಅಗತ್ಯವಿದ್ದಲ್ಲಿ ಈ ಸಮಯದಲ್ಲಿ ಡಾಕ್ಟರರ ಸಲಹೆಯನ್ನೂ ಕೇಳಬಹುದು.

*ಈ ಸಂದರ್ಭದಲ್ಲಿ ಯಾವ ಡಾಕ್ಟರನ್ನು ಕಾಣಬೇಕು ?*

ಸಾಧ್ಯವಿದ್ದರೆ ಗೈನಕೊಲಜಿ (ಮಹಿಳೆಯರ ಬಗ್ಗೆ) ಕಲಿತ ಒಬ್ಬಳು ಮಹಿಳಾ ಡಾಕ್ಟರನ್ನು ತೋರಿಸುವುದು ಉತ್ತಮ. ಆದರೆ ಮಾತ್ರ ಹುಡುಗಿಗೆ ನಾಚಿಕೆಯಿಲ್ಲದೆ ತಮ್ಮ ಸಮಸ್ಯೆಯನ್ನು ವಿವರಿಸಲು ಸಾಧ್ಯವಿದೆ.

*ಹುಡುಗಿಯರಲ್ಲಿ ಉಂಟಾಗುವ ಋತುಸ್ರಾವ (ಮುಟ್ಟು) ಎಂದರೇನು ?*

ಒಬ್ಬಳು ಹುಡುಗಿಗೆ ಲೈಂಗಿಕ ಬೆಳವಣಿಗೆಯೂ ವಂಶಾಭಿವೃದ್ಧಿಗೆ ಬೇಕಾದ ಸಾಮರ್ಥ್ಯವೂ ಆಗಿದೆ ಎಂಬುದರ ಲಕ್ಷಣವೇ ಋತುಸ್ರಾವ ಅಥವಾ ಮುಟ್ಟು. ಪ್ರತೀ ಮಹಿಳೆಯ್ಲಲೂ ಗರ್ಭಪಾತ್ರವು ಎಲ್ಲಾ ತಿಂಗಳೂ ಗರ್ಭಧಾರಣೆ ನಡೆಸಲು ತಯಾರಿ ನಡೆಸುತ್ತದೆ.

ಗರ್ಭಪಾತ್ರದ ಚರ್ಮವು ದಪ್ಪವಾಗಿ ರಕ್ತದ ಹರಿಯುವಿಕೆಯಿಂದ ಕೂಡುತ್ತದೆ. ಆದರೆ ಈ ಸಮಯದಲ್ಲಿ ಗರ್ಭಧಾರಣೆಯಾಗದಿದ್ದರೆ ಈ ಚರ್ಮದ ಪೊರೆಯೂ ರಕ್ತವೂ ಒಡೆಯುತ್ತದೆ ಮತ್ತು ಯೋನಿ ದ್ವಾರದ ಮೂಲಕ ರಕ್ತವೆಲ್ಲ ಹೊರಬರುತ್ತದೆ. ಇದನ್ನೇ ಋತುಸ್ರಾವ ಎನ್ನುತ್ತಾರೆ.

*ಋತುಸ್ರಾವ ಎಷ್ಟು ದಿವಸ ಇರುತ್ತದೆ ?*

ಸಾಧಾರಣವಾಗಿ ನಾಲ್ಕೈದು ದಿನಗಳೇ ಇರುತ್ತವೆ.



*ಎಷ್ಟು ದಿನಗಳಿಗೊಮ್ಮೆ ಋತುಸ್ರಾವ ಉಂಟಾಗುತ್ತದೆ. ?*

ಸಾಧಾರಣವಾಗಿ ಆರೋಗ್ಯವುಳ್ಳ ಮಹಿಳೆಗೆ 28 ದಿನಗಳಿಗೊಮ್ಮೆ ಋತುಸ್ರಾವ ಉಂಟಾಗುತ್ತದೆ.

*ಇಪ್ಪತ್ತೆಂಟು ದಿನಗಳಿಗೊಮ್ಮೆ ಋತುಸ್ರಾವ ಆಗದಿದ್ದರೆ ಅದು ಒಂದು ರೋಗವೇ ?*

ಖಂಡಿತ ಅಲ್ಲ. ಋತುಸ್ರಾವ ಆರಂಭವಾದ ಹುಡುಗಿಯರಲ್ಲಿ ಮೊದಲು ಎರಡು ಮೂರು ತಿಂಗಳಿಗೊಮ್ಮೆಯೇ ಇದು ನಡೆಯುತ್ತದೆ. ಇದಕ್ಕಿಂತ ತಡವಾದರೂ ಅದು ರೋಗವಲ್ಲ.

*ಋತುಸ್ರಾವದ ಸಮಯದಲ್ಲಿ ಕೆಲಸ ಮಾಡಬಾರದೆನ್ನುವುದು ಸರಿಯೇ ?*

ಸರಿಯಲ್ಲ. ಮನಸ್ಸಿನ ಆರೋಗ್ಯವೇ ಇಲ್ಲಿ ಪ್ರಧಾನ. ಯಾವ ಕೆಲಸವನ್ನು ಬೇಕಾದರೂ ಮಾಡಬಹುದು.

*ಋತುಸ್ರಾವದ ಅವಧಿಯಲ್ಲಿ ಹೆಚ್ಚಿನವರಿಗೆ ಹೊಟ್ಟೆನೋವು ಸೊಂಟನೋವು ತಲೆದೋರುತ್ತದೆಯಲ್ಲವೇ ?*

ಹಾಗೇನಿಲ್ಲ. ಋತುಸ್ರಾವದ ಸಮಯದಲ್ಲಿ ಮನಸ್ಸಿಗೂ ಶರೀರಕ್ಕೂ ತೋರುವ ಮಾನಸಿಕ ಅನುಭವಗಳು, ಹಾರ್ಮೋನಿನ ಏರಿಳಿತಗಳು ಇವೆಲ್ಲ ಹೊಟ್ಟೆನೋವು, ಸೊಂಟನೋವು ಮೊದಲಾದವುಗಳಾಗಿ ಅನಿಸುತ್ತವೆ. ಇದು ಒಂದು ಸಾಧಾರಣ ಕ್ರಿಯೆಯಾಗಿದೆ. ವಿಶೇಷವಾಗಿ ಏನೂ ಆಗುವುದಿಲ್ಲ.

*ಕೆಲವರು ಋತುಸ್ರಾವದ ಸಮಯದಲ್ಲಿ ಪರಂಪರಾಗತವಾಗಿ ಸೊಂಟನೋವು ಉಂಟಾಗುತ್ತದೆಯೆಂದು ಹೇಳುತ್ತಾರೆ. ಇದು ಸರಿಯೇ?*

ಖಂಡಿತ ಅಲ್ಲ.

*ಋತುಸ್ರಾವದ ಸಮಯದಲ್ಲಿ ಆಹಾರ ತಯಾರಿಸುವುದೂ ಉಳಿದವರ ಜೊತೆ ಕುಳಿತುಕೊಳ್ಳುವುದು ತಪ್ಪೇ ?*

ಅಲ್ಲ. ಹಿಂದಿನ ಕಾಲದಲ್ಲಿ ನಂಬಿಕೆಯ ಕಾರಣದಿಂದ ಅಶುದ್ಧವಾಗಿ ಕಾಣಲಾಗುತ್ತಿತ್ತು. ಈಗ ಎಲ್ಲರೂ ಸೇರಿ ಆಹಾರ ತಯಾರಿಸುವುದನ್ನೂ, ಆಹಾರ ಸೇವಿಸುವುದನ್ನೂ, ಪ್ರಯಾಣಿಸುವುದನ್ನೂ ಮಾಡುವುದರಲ್ಲಿ ಯಾವುದೇ ಅಭ್ಯಂತರವಿಲ್ಲ. ಮಹಿಳೆಯರ ದೇಹದಲ್ಲಿ ಚಟುವಟಿಕೆಗಳು ಸರಿಯಾಗಿ ನಡೆಯುತ್ತಿದೆ ಎಂಬುದರ ಪ್ರಮಾಣವಾಗಿದೆ ಋತುಸ್ರಾವ.

*ಗಂಡು ಮಕ್ಕಳಲ್ಲಿ ಲೈಂಗಿಕ ಬೆಳವಣಿಗೆ ಯಾವಾಗ ಶುರುವಾಗುತ್ತದೆ ?*

ಗಂಡು ಮಕ್ಕಳಲ್ಲಿ ಸಾಧಾರಣವಾಗಿ 12 ವಯಸ್ಸಾಗುವಾಗಲೇ ಪುರುಷ ಹಾರ್ಮೋನುಗಳು ಉತ್ಪತ್ತಿಯಾಗತೊಡಗುತ್ತವೆ. ಗಂಡು ಮಕ್ಕಳ ವೃಷಣ ಚೀಲ ಮತ್ತು ವೃಷಣಗಳು ವೃದ್ಧಿಯಾಗುತ್ತವೆ. ಲಿಂಗ ಬೆಳೆದು ದೊಡ್ಡದಾಗುತ್ತದೆ. ಲಿಂಗದ ಸುತ್ತಲೂ, ಕಂಕುಳ ಬಳಿಯೂ ರೋಮಗಳು ಬೆಳೆಯತೊಡಗುತ್ತವೆ. ಸ್ವರದಲ್ಲಿ ಬದಲಾವಣೆಯಾಗುತ್ತದೆ. ಭುಜ ಅಗಲವಾಗುತ್ತದೆ. ದೇಹದ ತೂಕ ಹೆಚ್ಚಾಗುತ್ತದೆ.

*ಗಂಡು ಮಕ್ಕಳಲ್ಲಿ ಯಾವಾಗ ಲೈಂಗಿಕ ಬೆಳವಣಿಗೆಯಾಗುತ್ತದೆ ?*

ಹದಿನಾಲ್ಕು ವಯಸ್ಸಿನ ನಂತರ ಆರೋಗ್ಯದ ಅನುಸಾರ ಶುಕ್ಲ ಉತ್ಪತ್ತಿಯಾಗುತ್ತದೆ ಮತ್ತು

ವಿಸರ್ಜಿಸಲು ಸಜ್ಜಾಗುತ್ತದೆ.

*ನಿದ್ದೆಯಲ್ಲಿ ಶುಕ್ಲ ವಿಸರ್ಜನೆಯಾಗುವುದು ರೋಗವೇ ?*

ಅಲ್ಲ. ಒಂದು ಕೊಡಪಾನದಲ್ಲಿ ನೀರು ತುಂಬಿರುವಾಗ ಅದಕ್ಕೆ ಪುನಃ ನೀರು ಹಾಕಿದರೆ ಅದು ತುಂಬಿ ತುಳುಕುತ್ತದೆ. ಅದರಂತೆ ಶುಕ್ಲ ತುಂಬಿದ ವೃಷಣ ಚೀಲಕ್ಕೆ ಪುನಃ ವೃಷನ ಸೇರಿದಾಗ ಅದು ಹೊರಬರುತ್ತದೆ. ಇದು ಅವರಿಗೆ ತಿಳಿಯದೆ ಸಂಭವಿಸುತ್ತದೆ. ಇದು ಒಂದು ರೋಗವಲ್ಲ. ಒಳ್ಳೆಯ ಪುಸ್ತಕಗಳನ್ನು ಓದುವುದು, ಮೋಹದ ಕನಸುಗಳನ್ನು ಕಾಣಬಾರದು. ಲೈಂಗಿಕ ಚಪಲತೆಗಳನ್ನು ಭಾವಿಸಬಾರದು ಮೊದಲಾದವುಗಳಿಂದ ಶುಕ್ಲ ವಿಸರ್ಜನೆ ಕಡಿಮೆಯಾಗುತ್ತದೆ. ಶುಕ್ಲ ವಿಸರ್ಜನೆಯು ಒಂದು ಸಾಧಾರಣ ಕ್ರಿಯೆ ಮಾತ್ರ. ಇದು ಬೆಳವಣಿಗೆಯ ಒಂದು ಭಾಗವೇ ಆಗಿದೆ.

*ಕೆಲವೊಮ್ಮೆ ಕೆಲವು ಜನರು ಹುಡುಗಿಯರನ್ನು ಬಳಿ ಕರೆದು ಮುದ್ದಿಸುತ್ತಾರೆ.*

*ಇದು ಯಾಕೆ ?*

ತಂದೆ ತಾಯಿಯಲ್ಲದವರು ಈ ರೀತಿ ಮುದ್ದಿಸುವುದನ್ನು ಸರಿಯಾಗಿ ಗಮನಿಸಬೇಕು. 8 ವಯಸ್ಸಾದ ಹುಡುಗಿಗೆ ಕೆಲವು ಭಾಗಗಳನ್ನು ಮುಟ್ಟಿದರೆ ಅವಳಿಗೆ ತಿಳಿಯದೆ ಆನಂದವಾಗುತ್ತದೆ. ಈ ಸ್ವಭಾವದ ಲಾಭವನ್ನು ಪಡೆಯುವ ಕೆಲ ಜನರಿದ್ದಾರೆ. ಆದುದರಿಂದ ಮಕ್ಕಳ ಶರೀರವನ್ನು ಅನಾವಶ್ಯಕವಾಗಿ ಕೆಲವು ಭಾಗಗಳನ್ನು ಮುಟ್ಟುವಾಗ ಮಕ್ಕಳು ಅದನ್ನು ಅರ್ಥಮಾಡಿಕೊಳ್ಳಬೇಕು. ಸಿಹಿತಿಂಡಿ, ಬಟ್ಟೆಬರೆ ಮತ್ತಿತರ ಉಡುಗೊರೆಗಳನ್ನು ನೀಡಿ ಮಕ್ಕಳನ್ನು ಮರುಳು ಮಾಡಿ ಕೆಲಸ ಸಾಧಿಸುವ ಸಂಬಂಧಿಕರೂ, ಗೆಳೆಯರೂ ಇದ್ದಾರೆ. ಇವರ ಬಗ್ಗೆ ಜಾಗೃತರಾಗಿರಬೇಕು.

*ಕೆಲವರು ನೀಡುವ ಆಹಾರ ಪಾನೀಯಗಳನ್ನು ಕುಡಿಯಬಾರದೆನ್ನುವುದು ಯಾಕೆ ?*

ಬಾಲ್ಯದಲ್ಲಿ ಗೆಳೆತನ ಅಭಿನಯಿಸಿ ಅನೇಕರು ಬರುತ್ತಾರೆ. ಮದುವೆಯಾಗಲೂ ಒಂದಾಗಿ ಬಾಳಲೂ ಅವರು ತಯಾರಾಗುತ್ತಾರೆ. ಉಡುಗೊರೆಗಳನ್ನು ನೀಡುತ್ತಾರೆ. ಒಳ್ಳೆಯ ಮಾತುಗಳನ್ನಾಡುತ್ತಾರೆ. ಉಡುಗೊರೆಗಳನ್ನು ನೀಡುತ್ತಾರೆ. ಹುಡುಗಿಯನ್ನು ಆಕರ್ಷಿಸುವ ಸಿನಿಮಾಕ್ಕೆ ಕರೆದೊಯ್ಯುತ್ತಾರೆ. ಇವೆಲ್ಲ ಹುಡುಗಿಯನ್ನು ಆಕರ್ಷಿಸುವ ಸಲುವಾಗಿ ಆಗಿರುತ್ತದೆ ಮತ್ತು ಅವಳನ್ನು ತಮ್ಮ ನಿಯಂತ್ರಣದಲ್ಲಿರಿಸುವುದೇ ಅವರ ಉದ್ದೇಶ. ಇಂತಹವರ ಬಳಿ ಇರುವಾಗ ಅಥವಾ ಅವರೊಂದಿಗೆ ಪ್ರಯಾಣ ಮಾಡುವಾಗ ಅನಾಹುತ ಸಂಭವಿಸಬಹುದು. ಇದರಲ್ಲಿ ಅಮಲು ಪದಾರ್ಥಗಳು ಅಥವಾ ಮೂರ್ಛೆ ಹೋಗುವ ಮದ್ದು ಬೆರೆಸಿರಲೂಬಹುದು. ಇದು ಕೌಮಾರ ಪ್ರಾಯದವರನ್ನು ಸಿಲುಕಿಸಲು ಹಾಗೂ ನಾಶಮಾಡುವ ಉದ್ದೇಶದಿಂದ ಆಗಿದೆ. ಆದುದರಿಂದ ಅಂತಹ ಜನರ ಸಂಗದಿಂದ ದೂರವಿರಬೇಕು. ಅವರು ನೀಡುವ ಪ್ರೀತಿಯನ್ನು ಮಿಥ್ಯವೆಂದು ಪರಿಗಣಿಸಬೇಕು.

*ಈಗಿನ ಮಕ್ಕಳು ಶಾಲೆಗಳಲ್ಲಿಯೂ ಕಾಲೇಜುಗಳಲ್ಲಿಯೂ ಊಟ ಮಾಡುವ ಬದಲು ಕೊಕ್ಕೋಕೋಲಾ ಹಾಗೂ ಪೆಪ್ಸಿ ಮೊದಲಾದವುಗಲನ್ನು ಆಹಾರವಾಗಿ ಸೇವಿಸುತ್ತಾರಲ್ಲಾ ? ಇದು ಆರೋಗ್ಯಕ್ಕೆ ಹಾನಿಕಾರವೇ? ಉತ್ತಮವೇ ?*

ಆರೋಗ್ಯಕ್ಕೆ ಉತ್ತಮವಲ್ಲ. ಈ ಪ್ರಾಯದ ಮಕ್ಕಳು ಇಂತಹ ಪಾನೀಯಗಳನ್ನು ಹೆಚ್ಚಾಗಿ ಸೇವಿಸಬಾರದು. ಪೆಪ್ಸಿ ಮೊದಲಾದವುಗಳನ್ನು ಅಮಿತವಾಗಿ ಸೇವಿಸುವುದರಿಂದ ರೋಗ ಬರುವ ಸಾಧ್ಯತೆ ಹೆಚ್ಚು. ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು.



*ಕೌಮಾರ ಪ್ರಾಯದ ಮಕ್ಕಳಲ್ಲಿ ತಂದೆ ತಾಯಿಯರು ಯಾಕೆ ನಿಯಂತ್ರಣಗಳನ್ನು ಏರ್ಪಡಿಸುತ್ತಾರೆ ?*

ಕೌಮಾರ ಪ್ರಾಯದಲ್ಲಿ ಎಲ್ಲವನ್ನೂ ಸ್ವಂತವಾಗಿ ಮಾಡುವ ಮನಸ್ಸಿರುತ್ತದೆ. ಸ್ವಂತವಾಗಿ ಆಲೋಚಿಸುವ, ಸ್ವತಂತ್ರವಾಗಿ ಪ್ರಯಾಣಿಸುವ ಬಯಕೆ ಇರುತ್ತದೆ. ಇದು ಒಂದು ವಿವೇಕಯುತ ಆಲೋಚನೆಯಲ್ಲ. ಬದಲಾಗಿ ಕೌಮಾರ ಪ್ರಾಯದ ಒಂದು ವಿಶೇಷತೆಯಾಗಿದೆ. ಇಲ್ಲಿ ಕೆಲವೊಮ್ಮೆ ತಪ್ಪುಗಳು ಸಂಭವಿಸಬಹುದು. ಇದರಿಂದಾಗಿ ಕೌಮಾರ ಪ್ರಾಯದಲ್ಲಿ ತಂದೆ ತಾಯಿಯರು ಕೆಲವೊಂದು ಕಡಿವಾಣಗಳನ್ನು ಹಾಕುತ್ತಾರೆ.

*ಗಂಡು ಮಕ್ಕಳೂ, ಹುಡುಗಿಯರೂ ಒಟ್ಟಿಗೆ ಮಾತನಾಡುವುದೂ, ನಡೆಯುವುದೂ ತಪ್ಪೇ ?*

ಖಂಡಿತಾ ಅಲ್ಲ. ಅವರು ಪರಸ್ಪರ ಮಾತನಾಡಬೇಕು. ವಿಚಾರ ವಿನಿಮಯ ನಡೆಸಬೇಕು. ಅದು ಒಂದು ತೆರೆದ ಸ್ಥಳದಲ್ಲಿಯೂ ಗುಂಪಾಗಿಯೂ ಆಗಿರಬೇಕು. ಮುಚ್ಚಿದ ಕೋಣೆಯಲ್ಲಿ ಏಕಾಂತದಲ್ಲಿ ಮಾತುಕತೆ, ವಿಚಾರ ವಿನಿಮಯ, ಸ್ನೇಹ ಅಬಿವ್ಯಕ್ತಿ ಮೊದಲಾದವುಗಳು ದಾರಿ ತಪ್ಪಿಸುವ ಸಾಧ್ಯತೆ ಇದೆ ಎಂಬುದನ್ನು ನೆನಪು ಮಾಡಬೇಕು.

*ಕೌಮಾರ ಪ್ರಾಯದವರು ಉತ್ತಮ ನಡತೆಯಿಂದ ದಾರಿ ತಪ್ಪಲು ಕಾರಣವೇನು ?*

ಕೌಮಾರ ಪ್ರಾಯದಲ್ಲಿ ಎಲ್ಲವನ್ನೂ ತಿಳಿಯಬೇಕು. ಅರ್ಥ ಮಾಡಿಕೊಳ್ಳಬೇಕು. ಎಲ್ಲವನ್ನೂ ಪಡೆಯಬೇಕು ಎಂಬ ಚಿಂತೆ ಇರುತ್ತದೆ. ಯಾವಾಗಲಾದರೂ ಏನಾದರೂ ಹೊಸ ವಿಚಾರವನ್ನು ಕಲಿತಾಗ ಅದನ್ನು ಗೆಳೆಯರೊಂದಿಗೆ ಕೇಳಿಯೋ, ಚುರುಕು ಬುದ್ಧಿಯವನೆಂದು ತಿಳಿಸಲೋ ಆ ಕೆಲಸವನ್ನು ಅನುಷ್ಠಾನಗೊಳಿಸಲು ಎಲ್ಲರ ಆಕರ್ಷಣೆಯನ್ನು ಪಡೆಯಲು ಸರಿ ಯಾವುದು, ತಪ್ಪು ಯಾವುದು ಎಂದು ತಿಳಿಯುವ ಬುದ್ಧಿ ಇರುವುದಿಲ್ಲ. ಇಲ್ಲಿ ಮದ್ಯಪಾನ, ಧೂಮಪಾನ, ಅಮಲು ಪದಾರ್ಥ ಸೇವನೆ ಮೊದಲಾದವುಗಳ ಸೇವನೆಯನ್ನೂ, ಲೈಂಗಿಕ ಚಟುವಟಿಕೆ ಮೊದಲಾದವುಗಳಿಗೆ ದಾಸರಾಗುತ್ತಾರೆ. ಇದರ ಜೊತೆಗೆ ದೊಡ್ಡವರ ಪ್ರೋತ್ಸಾಹವೂ ಇದ್ದರೆ ಪಕ್ಕನೆ ಸಂಭವಿಸುತ್ತದೆ.

*ಗೆಳೆಯರನ್ನು ಆಯ್ಕೆ ಮಾಡುವಾಗ ಗಮನಿಸಬೇಕೇ ?*

ಕೌಮಾರ ಪ್ರಾಯದಲ್ಲಿ ಗೆಳೆಯರನ್ನು ಆಯ್ಕೆ ಮಾಡುವಾಗ ಪ್ರತ್ಯೇಕ ಗಮನಿಸಬೇಕು. ಕೆಟ್ಟ ಗೆಳೆಯನ ಸಂಗದಿಂದ ಜೀವನವೇ ಹಾಳಾಗುತ್ತದೆ. ಆದುದರಿಂದ ಉತ್ತಮ ಸ್ವಭಾವದ ಗೆಳೆಯರನ್ನು ಆಯ್ಕೆ ಮಾಡಲು ಕೌಮಾರ ಪ್ರಾಯದವರು ಗಮನಿಸಬೇಕು.

*ಕೌಮಾರ ಪ್ರಾಯದ ಚಪಲತೆಯಿಂದಲೂ ಕೆಟ್ಟ ಸಂಗದಿಂದಲೂ ಮೋಚನೆ ಪಡೆಯಲು ಮಾರ್ಗವೇನು ?*

ಕೌಮಾರ ಪ್ರಾಯವು ಜಿಜ್ಞಾಸೆಯ ಮತ್ತು ಸ್ವಂತವಾಗಿ ಮಾಡುವ ಸಮಯ. ಈ ಸಮಯದಲ್ಲಿ ಅಗತ್ಯವಿಲ್ಲದ ಚಿಂತೆಗಳಿಂದ ಮತ್ತು ಕೆಟ್ಟ ಗೆಳೆಯರಿಂದ ರಕ್ಷಣೆ ಪಡೆಯಲು ಸ್ವಂತ ಇಷ್ಟಗಳನ್ನು ಕಂಡುಹಿಡಿಯಬೇಕು. ಸಂಗೀತ, ಭಾಷಣ, ಚಿತ್ರಕಲೆ, ಪದ್ಯ, ಕರಕುಶಲ ಕೆಲಸ, ಹೊಲಿಗೆ. ಜಾನಪದ ಕಲೆ ಮೊದಲಾದವುಗಳನ್ನು ಮುಖ್ಯವಾಗಿ ಆರಿಸಿಕೊಳ್ಳಬೇಕು. ಏಕಾಂಕ ನಾಟಕ ಮತ್ತು ಒಳ್ಳೆಯ ಸಾಹಿತ್ಯ ಕೃತಿಗಳನ್ನು ಓದಬೇಕು.

*ಕುಟುಂಬ ಜೀವನದ ಬಗ್ಗೆಯೂ ನಮಗೆ ಕೆಲವೊಂದು ವಿಷಯಗಳನ್ನು ತಿಳಿಯುವ ಆಕಾಂಕ್ಷೆಯಿದೆ ಅಂಟಿ.*

ಹೌದಾ! ನೀವು ಹುಷಾರಾಗಿದ್ದೀರಲ್ಲಾ? ಮೊದಲು ಸಂಶಯವಿಲ್ಲದವರು ಈಗ ಅನೇಕ ವಿಷಯಗಳನ್ನು ಕೇಳುತ್ತಿದ್ದೀರಲ್ಲಾ? ಯಾವುದೇ ಸಂಶಯಗಳು ಉದ್ಭವಿಸಿದಲ್ಲಿ ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಬಾರದು. ಅದನ್ನು ಆಗಲೇ ಪರಿಹರಿಸಿಕೊಳ್ಳಬೇಕು. ಗೆಳೆಯರು ಹೇಳಿದಂತೆ ಕೇಳಬಾರದು. ಈಗ ಎಲ್ಲಾ ಕಡೆ ಪರಿಚಯವುಳ್ಳ ಕೌನ್ಸಿಲರುಗಳಿದ್ದಾರೆ. ಅವರೊಡನೆ ನೀವು ಈ ವಿಷಯಗಳನ್ನೆಲ್ಲಾ ಚರ್ಚೆ ಮಾಡಬಹುದು.

ಇನ್ನು ಕೌಟುಂಬಿಕ ಜೀವನದ ಬಗ್ಗೆ ಪ್ರಾಯಪೂರ್ತಿಯಾಗುವುದು ಹುಡುಗಿಯರಿಗೆ 18 ವರ್ಷ ಹಾಗೂ ಹುಡುಗರಿಗೆ 21 ವರ್ಷವಾದಾಗ. ಈ ಪ್ರಾಯವಾದಾಗ ಮದುವೆ ಮಾಡಬಹುದು. ಈ ಮದುವೆಯನ್ನು ಸಾಧ್ಯವಿದ್ದರೆ ಮನೆಯವರು ಒಪ್ಪಿಗೆ ನೀಡಿದ ಪ್ರಕಾರವೇ ಮಾಡುವುದು ಉತ್ತಮ. ಸಾಧಾರಣವಾಗಿ ವಿವಾಹದ ಪ್ರಾಯ ಹುಡುಗಿಗೆ 25ರ ಹತ್ತಿರ ಹಾಗೂ ಪುರುಷರಿಗೆ 30ರ ಹತ್ತಿರ ಒಳ್ಳೆಯದಾಗಿರುತ್ತದೆ. ಇದರಿಂದ ಪಕ್ವತೆ ದೊರಕುತ್ತದೆ ಮಾತ್ರವಲ್ಲ ಕೆಲಸವೂ ಸಿಕ್ಕಿರುತ್ತದೆ.

ಚಿಕ್ಕ ಕುಟುಂಬ ಸಂತುಷ್ಟ ಕುಟುಂಬ ಎನ್ನುವುದು ಯಾಕೆ?

ನಮ್ಮ ದೇಶದಲ್ಲಿ ಕಳೆದ 100 ವರ್ಷಗಳಲ್ಲಿ ಜನಸಂಖ್ಯೆ ಮೂರು ಪಟ್ಟು ಹೆಚ್ಚಾಯಿತು. ಆದರೆ ಪ್ರಕೃತಿ ಸಂಪತ್ತು ಅಥವಾ ಭೂಮಿಯ ವಿಸ್ತೀರ್ಣ ಹೆಚ್ಚಾಗಲಿಲ್ಲ. ಮಾತ್ರವಲ್ಲ ನಿರುದ್ಯೋಗ ಮತ್ತು ಬಡತನ ಹೆಚ್ಚಾಗುತ್ತಿದೆ. ನಮ್ಮ ದೇಶದ ಅಸ್ತಿತ್ವಕ್ಕೇ ಜನಸಂಖ್ಯೆಯ ನಿಯಂತ್ರಣ ಅನಿವಾರ್ಯ. ಆದುದರಿಂದ ನಮಗೆ ಒಂದೋ, ಎರಡೋ ಮಕ್ಕಳು ಸಾಕು ಎಂಬ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಇದು ಗಂಡ ಹೆಂಡತಿಯರಿಬ್ಬರೂ ಸರಿಯಾಗಿ ನಿಯಂತ್ರಣ ಮಾಡಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಮೂಲಕ ನೆರವೇರಿಸಲು ಸಾಧ್ಯವಾಗುತ್ತದೆ. ಇಂತಹ ಕೆಲವೊಂದು ವಿಷಯಗಳನ್ನು ವಿವಾಹದ ನಂತರ ಗಂಡ ಹೆಂಡತಿಯರಿಬ್ಬರೂ ಜೊತೆಯಾಗಿ ಆಲೋಚಿಸಿ ಸರಿಯಾಗುವ ಮಾರ್ಗಗಳನ್ನು ಸ್ವೀಕರಿಸುವುದು ಉತ್ತಮ.

*ನಿನ್ನೆಯ ಪೇಪರಿನಲ್ಲಿ ಮದುವೆಯಾಗದ ಹುಡುಗಿಗೆ ಹೆರಿಗೆಯಾದುದಾಗಿ ಓದಿದೆವು. ಇದು ಹೇಗೆ ಉಂಟಾಗುತ್ತದೆ ?*

ಹುಡುಗಿಗೆ ವಿವಾಹವಾಗದೆಯೇ ಹೆರುವ ಸಾಧ್ಯತೆ ಇದೆ. ಮಾತ್ರವಲ್ಲ ಒಮ್ಮೆಯೂ ಋತುಸ್ರಾವ ಆಗದೆಯೇ ಹೆರಿಗೆಯಾಗಬಹುದು. ಮಹಿಳೆ ಮತ್ತು ಪುರುಷರ (ಸಂಯೋಗದಿಂದ) ದೈಹಿಕ ಸಂಪರ್ಕದಿಂದ ಗರ್ಭಧಾರಣೆ ಉಂಟಾಗುತ್ತದೆ. ಹೀಗೆ ಉಂಟಾಗದೆ ಇರಬೇಕಾದರೆ ಮಹಿಳೆ ಯಾವಾಗಲೂ ಜಾಗರೂಕಳಾಗಿರಬೇಕು. ತಮ್ಮ ದೈನಂದಿನ ಚಟುವಟಿಕೆಗಳೆಲ್ಲಾ ಪುರುಷರಿಂದ ಸ್ವಲ್ಪ ಅಂತರವನ್ನು ಕಾಯ್ದುಕೊಳ್ಳಬೇಕು. ಮದುವೆಯಾಗದೆ ಯಾರೊಂದಿಗೂ ದೈಹಿಕ ಸಂಪರ್ಕ ಮಾಡಲು ಅನುಮತಿ ನೀಡಬಾರದು. ಯಾರಾದರೂ ಹಾಗೆ ಮಾಡಿದರೆ ಕೂಡಲೆ ತಂದೆ ತಾಯಿಯರಿಗೆ ವಿಷಯ ತಿಳಿಸಬೇಕು.

*[illegible] ಕೆಲಸ ಮಾಡಿದರೆ ನಮ್ಮ ದೇಶದಲ್ಲಿ ಶಿಕ್ಷೆ ಇದೆಯೇ ?*

[illegible] ಕಠಿಣ ಶಿಕ್ಷೆ ಸಿಗುತ್ತದೆ. ಮಾತ್ರವಲ್ಲ ಇಂತಹ ಆಪಾದನೆ ಉಂಟಾದರೆ ಇಂತಹ [illegible] ಮಾಡಿಲ್ಲ ಎಂದು ಸಾಬೀತುಪಡಿಸ ಬೇಕಾದ ಜವಾಬ್ದಾರಿ ಪುರುಷರಿಗೆ ಇದೆ. ಇಂತಹ



ಕೇಸುಗಳನ್ನು ರಹಸ್ಯವಾಗಿ ಬೇರೆಯವರಿಗೆ ಗೊತ್ತಾಗದ ರೀತಿಯಲ್ಲಿ ಕೋರ್ಟಿನಲ್ಲಿ ನಡೆಸುತ್ತಾರೆ. ಆದುದರಿಂದ ಹೆದರಿಕೆಯಿಲ್ಲದೆ ಸತ್ಯಸಂಧತೆಯಿಂದ ವಿಷಯಗಳನ್ನು ಹೇಳಬಹುದು.

*ಯಾರೂ ಬಳಿಯಿಲ್ಲದ ಸಮಯದಲ್ಲಿ ಅಥವಾ ಹುಡುಗಿಯ ಒಪ್ಪಿಗೆಯಿಲ್ಲದೆ ಈ ರೀತಿ ದೈಹಿಕ ಸಂಪರ್ಕ ಮಾಡಿದರೆ ಏನು ಮಾಡಬೇಕು?*

ಇದೆಂತಹ ಪ್ರಶ್ನೆ. ಇಂತಹ ವಿಷಯಗಳು ಎಲ್ಲಿ ಉಂಟಾದರೂ ಕೂಡಲೇ ಹುಡುಗಿಯನ್ನು ಅಥವಾ ಮಹಿಳೆಯನ್ನು ಹತ್ತಿರದ ಆಸ್ಪತ್ರೆಗೆ ತಲುಪಿಸಬೇಕು. ಅಲ್ಲಿರುವ ಡಾಕ್ಟರು ಮಹಿಳೆಯಾಗಿದ್ದರೆ ಉತ್ತಮ. ಈ ಸಮಯದಲ್ಲಿ ಹುಡುಗಿಯನ್ನು ಸ್ನಾನ ಮಾಡಿಸಲು ಅಥವಾ ಬಟ್ಟೆ ಬದಲಾಯಿಸಲು ಬಿಡಬಾರದು. ಹುಡುಗಿಯ ಶರೀರದಿಂದ ದೊರಕುವ ಬೀಜವನ್ನು ಮತ್ತು ಘಟನೆ ನಡೆದ ಸ್ಥಳದಿಂದ ದೊರಕುವ ರೋಮಗಳಿಂದ ತಪ್ಪಿತಸ್ಥರನ್ನು ಕಂಡು ಹಿಡಿಯಬಹುದು. ಈ ಪ್ರಪಂಚದ ಪ್ರತಿಯೊಬ್ಬ ಮನುಷ್ಯನ ಬೀಜ ಮತ್ತು ರೋಮ ಬೇರೆ ಬೇರೆ ರೀತಿಯಾಗಿದೆ. ಆದುದರಿಂದ ಇಂತಹ ಕೆಲವೊಂದು ವಿಷಯಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ತಪ್ಪಿತಸ್ಥರಿಗೆ ನಮ್ಮ ದೇಶದಲ್ಲಿ ಆ ಅಪರಾಧಕ್ಕೆ ಸಿಗುವ ಗರಿಷ್ಠ ಶಿಕ್ಷೆ ಕೊಡಿಸಲು ಸುಲಭವಾಗುತ್ತದೆ.

*ನಮ್ಮ ಊರಿನಲ್ಲಿ ಒಬ್ಬಳು ಅಕ್ಕ ರಾತ್ರಿ ಮನೆ ಬಿಟ್ಟು ಹೋಗಿ ಆಕೆಯ ಪ್ರಿಯತಮನೊಂದಿಗೆ ಮದುವೆ ಮಾಡಿದಳು. ಸ್ವಲ್ಪ ಸಮಯದ ನಂತರ ಅವಳ ಗಂಡ ಅವಳನ್ನು ಬಿಟ್ಟು ಹೋದರು ಮತ್ತು ಬೇರೆ ಮದುವೆಯಾದರು. ಮೊದಲು ಅಕ್ಕನನ್ನು ರಿಜಿಸ್ಟರ್ ಮದುವೆಯಾಗಿದ್ದರು. ಆದರೂ ಹೇಗೆ ಇದು ಉಂಟಾಯಿತು ?*

ಹುಡುಗಿಯರು ಬಹಳ ಗಂಭೀರವಾಗಿ ಕಾಣಬೇಕಾದ ಸಮಸ್ಯೆ ಇದು. ಮನೆ ಬಿಟ್ಟು ಓಡಿ ಹೋಗಿ ಅಥವಾ ರಿಜಿಸ್ಟರ್ ಆಫೀಸಿನಲ್ಲಿ ನಡೆಸುವ ವಿವಾಹ ಒಂದು ಪರಿಧಿಯವರೆಗೆ ಸಮ್ಮತವಲ್ಲ. ಅಲ್ಲಿ ವಿವಾಹ ನಡೆಸಿ ಜೀವಿಸುವ ಎಂಬ ಕರಾರು ಮಾತ್ರ. ರಿಜಿಸ್ಟರ್ ವಿವಾಹ ಗಟ್ಟಿಯಾಗಬೇಕಾದರೆ ಮದುವೆಯ ಒಂದು ತಿಂಗಳ ಮೊದಲು ನಾವು ವಿವಾಹವಾಗಲಿದ್ದೇವೆ ಎಂಬ ಕಾಗದವನ್ನು ರಿಜಿಸ್ಟರ್ ಆಫೀಸಿನಲ್ಲಿ ಅಂಟಿಸಬೇಕು. ನಂತರ ಯಾರಿಗೂ ಸಮಸ್ಯೆಯಿಲ್ಲದಿದ್ದರೆ ಇಬ್ಬರು ಸಾಕ್ಷಿಗಳ ಜೊತೆ ಬಂದು ರಿಜಿಸ್ಟರ್ ಮಾಡಬೇಕು. ಬದಲಾಗಿ ಈ ರೀತಿ ಓಡಿ ಹೋಗಿ ಮದುವೆಯಾದರೆ ತಂದೆಯ ಸ್ವತ್ತಿನಿಂದ ಏನೂ ದೊರಕಲಿಕ್ಕಿಲ್ಲ.

*ಈಗ ಏಡ್ಸ್ ಎಂಬ ಒಂದು ದೊಡ್ಡ ರೋಗದ ಬಗ್ಗೆ ಕೇಳುತ್ತಿದ್ದೇವಲ್ಲ. ಅದು ಏನು?*

AIDS ಮೊದಲು ಕಂಡು ಬಂದುದು ಅಮೇರಿಕಾದಲ್ಲಿ. (Acquiud Imuno Deficiency Syndrone) ಎಂಬುದರ ಸಂಕ್ಷಿಪ್ತ ರೂಪ. ಬಹಳ ಬೇಗನೆ ಈ ರೋಗ ಪ್ರಪಂಚದಾದ್ಯಂತ ಪಸರಿಸಿದೆ. ಅಮೇರಿಕಾದಲ್ಲಿ ಈ ರೋಗ ನಿಯಂತ್ರಣ ಸಾಧ್ಯವಾಗಿದೆ. ಆದರೆ ನಮ್ಮ ದೇಶದಲ್ಲಿ ರೋಗಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. 1981ರಲ್ಲಿ ಮೊದಲಾಗಿ ನಮ್ಮ ದೇಶದಲ್ಲಿ AIDS ಕಂಡುಬಂತು.

*AIDS ರೋಗ ಉಂಟಾಗುವುದು ಹೇಗೆ ?*

ಪುರುಷರ ಮತ್ತು ಮಹಿಳೆಯರ ದೈಹಿಕ ಸಂಬಂಧದಿಂದ ಹೆಚ್ಚಾಗಿ ಈ ರೋಗ ಹರಡುತ್ತದೆ. ಸ್ವವರ್ಗ ರತಿಯಲ್ಲಿಯೇ ಮುಳುಗಿರುವ ಜನರಿಗೂ ಈ ರೋಗ ಇರಬಹುದು. ರಕ್ತ ಪರಿಶೋಧನೆ ಮಾಡಿದರೆ ರಕ್ತವನ್ನು ಉಪಯೋಗಿಸುವವರಿಗೂ ಈ ರೋಗ ಬರುತ್ತದೆ. ಆಸ್ಪತ್ರೆಯ ಇಂಜಕ್ಷನಿನ ಸೂಜಿಗಳು, ಆಪರೇಶನಿಗೆ ಬಳಸುವ ಉಪಕರಣಗಳು ಮೊದಲಾದವುಗಳನ್ನು ಸರಿಯಾದ ರೀತಿಯಲ್ಲಿ

ಕುಡಿಸಬೇಕು. ಇಲ್ಲದಿದ್ದರೆ ರೋಗಾಣು ಬರುವ ಸಾಧ್ಯತೆ ಇದೆ.

### AIDS ರೋಗಕ್ಕೆ ಚಿಕಿತ್ಸೆ ಇದೆಯೇ ? ಒಬ್ಬರು ರೋಗಿ ಎಂದು ನಾವು ಹೇಗೆ ತಿಳಿಯುವುದು ?

AIDS ಎಂಬುದು ಒಂದು ರೋಗವಲ್ಲ. ರೋಗ ಬರುವ ಒಂದು ಅವಸ್ಥೆ. AIDS ರೋಗ ಬಂದವರು ಹಳದಿಕಾಮಾಲೆ (ಅರಸಿನಕುತ್ತ), ಹೊಟ್ಟೆನೋವು, ಕ್ಯಾನ್ಸರ್ ಅಥವಾ ಬೇರೆ ಯಾವುದೇ ರೋಗದಿಂದ ರೋಗಿ ಮರಣ ಹೊಂದುವ ಸಾಧ್ಯತೆ. 10 ರಿಂದ 18 ವರ್ಷದವರೆಗೆ ದೇಹದಿಂದ ಹೊರಕ್ಕೆ ಬಾರದೆ ಜೀವಿಸಬಲ್ಲುವುದು. AIDS ರೋಗಕ್ಕೆ ಫಲಪ್ರದ ಚಿಕಿತ್ಸೆ ಈ ತನಕ ಆವಿಷ್ಕಾರವಲ್ಲ.

### *ಏಡ್ಸ್ ರೋಗಗಳನ್ನು ಎಲ್ಲಿ ನಿಲ್ಲಿಸಬಹುದು ? ಅವರು ಉಳಿದವರಿಗೂ ರೋಗ ಹರಡಿಸುತ್ತಾರಲ್ಲ ?*

ಏಡ್ಸ್ ರೋಗಿಗಳ ಜೊತೆ ಮಲಗುವುದರಿಂದ, ಸ್ನಾನ ಮಾಡುವುದರಿಂದ ಅವರ ಜೊತೆ ಕುಳಿತು ಆಹಾರ ಸೇವಿಸುವುದರಿಂದ, ಅವರು ಉಪಯೋಗಿಸಿದ ಸ್ನಾನದ ಕೋಣೆ, ಕಕ್ಕೂಸು ಉಪಯೋಗಿಸುವುದರಿಂದ ರೋಗ ಯಾರಿಗೂ ಹರಡಲಾರದು. ಆದುದರಿಂದ ಏಡ್ಸ್ ರೋಗಿಗಳನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು. ಅವರನ್ನು ಕುಟುಂಬದ ಜೊತೆ ನಿಲ್ಲಿಸಿ ಮದ್ದು ಮಾಡಬೇಕು. ಅವರಿಗೆ ಮಾನಸಿಕ ನೆಮ್ಮದಿ ನೀಡಿ ಸಮಾಧಾನಪೂರ್ಣವಾದ ಮರಣ ಹೊಂದಲು ಅನುವು ಮಾಡಿಕೊಡಬೇಕಾದುದು ನಮ್ಮ ಕರ್ತವ್ಯ.

### *ನಾವು ತಿಳಿಯಬೇಕಾದ ಬೇರೆ ವಿಷಯಗಳು ಯಾವುವು ?*

ಮದುವೆಯಾದ ನಂತರ ತಾಯಿ ತನ್ನ ಮಗುವಿಗೆ ಮೊಲೆ ಹಾಲು ನೀಡಬೇಕು. ಹೆರಿಗೆಯಾದ ಕೂಡಲೇ ಮೊಲೆ ಹಾಲು ನೀಡಬಹುದು. ಮೊಲೆಹಾಲಿನ ಪ್ರಧಾನ ಘಟಕ ಕೋಲೆಸ್ಟ್ರೋಂ. ಇದು ಮಗುವಿಗೆ ನೀಡಬೇಕು. ಇದನ್ನು ಕೊಟ್ಟರೆ ಮಗುವಿಗೆ ಜೀವನವಿಡಿ ರೋಗನಿರೋಧಕ ರಕ್ತ ನೀಡುತ್ತದೆ. ಒಂದು ವೇಳೆ ಆರಪೇಶನ್ ಮೂಲಕ ಹೆರಿಗೆ ಮಾಡಿಸಿದರೂ ಆಪರೇಷನ್ ಥಿಯೇಟರಿನಿಂದ ಹೊರಗೆ ಬಂದಾಗ ಮಗುವಿಗೆ ಹಾಲು ನೀಡಬೇಕು.

### *ನಮ್ಮ ಮನೆಯ ಬಳಿಯ ಮಹಿಳೆಯೊಬ್ಬರು ಮೊಲೆಹಾಲಿಲ್ಲ ಎನ್ನುತ್ತಾರೆ. ಮೊದಲಿನ ಎರಡು ಮೂರು ದಿವಸ ಇತ್ತು. ನಂತರ ಟಿನ್ ಹಾಲು ಕೊಡುತ್ತಾರೆ. ಇದು ಯಾಕೆ ?*

ಆರು ತಿಂಗಳಿನವರೆಗೆ ಮಕ್ಕಳಿಗೆ ಮೊಲೆಹಾಲು ಮಾತ್ರ ಸಾಕು. ಹೆಚ್ಚು ಮೊಲೆ ಹಾಲು ಕುಡಿದ ಮಕ್ಕಳೇ ಹೆಚ್ಚು ಬುದ್ಧಿ ಇರುವ ಪ್ರೀತಿ ಇರುವ ಮಕ್ಕಳಾಗಿ ಬೆಳೆಯುತ್ತಾರೆ ಎಂದು ಅನ್ವೇಷಣೆಗಳಿಂದ ವ್ಯಕ್ತವಾಗಿದೆ. ಮನುಷ್ಯನಿಗೆ ಬುದ್ಧಿ ಬೆಳವಣಿಗೆಯಾಗಲು ಬೇಕಾದ ಟರಿನ್, ಸಿಸ್ಟಿನ್ ಎಂಬ ವಸ್ತುಗಳು ಮೊಲೆಹಾಲಿನಲ್ಲಿ ಇದೆ. ತಾಯಿಗೆ ಯಾವ ರೋಗವಿದ್ದರೂ ಮಗುವಿಗೆ ಎದೆ ಹಾಲು ನೀಡಬಹುದು. ಅತ್ಯಂತ ಸುಲಭವಾಗಿ ಮಗುವಿಗೆ ಬೇಕಾದಾಗಲೆಲ್ಲಾ ಶುದ್ಧವಾಗಿ ಇದನ್ನು ಕೊಡಬಹುದು. ಮಗುವಿಗೆ ಹಾಲು ಹೆಚ್ಚು ಹೆಚ್ಚು ಬಾರಿ ಕೊಟ್ಟಾಗ ಹಾಲಿನ ಉತ್ಪತ್ತಿಯೂ ಹೆಚ್ಚಾಗುತ್ತದೆ. ಮಕ್ಕಳಿಗೆ ಪ್ರೀತಿ ನೀಡಬೇಕು. ಎದೆ ಹಾಲು ನೀಡುವುದರಿಂದ ತಾಯಂದಿರಿಗೆ ಬರುವ ಸ್ತನದ ಕ್ಯಾನ್ಸರ್, ಮುಟ್ಟಿನ ತೊಂದರೆಗಳು, ಗರ್ಭಾಶಯ ರೋಗಗಳು ಬರಲಾರವು.



### *ಎಷ್ಟು ಸಮಯದವರೆಗೆ ಮಕ್ಕಳಿಗೆ ಮೊಲೆಹಾಲು ನೀಡಬೇಕು ?*

ಇದು ಪ್ರತೀ ತಾಯಿಯ ಇಷ್ಟದಂತೆ. ಎಷ್ಟು ಪ್ರಾಯದವರೆಗೆ ಬೇಕಾದರೂ ಕೊಡಬಹುದು. ಆರು ತಿಂಗಳಿನ ನಂತರ ಮಗುವಿಗೆ ಮನೆಯಲ್ಲಿ ತಯಾರಿಸುವ ಎಲ್ಲಾ ಆಹಾರಗಳನ್ನು ಕೊಡಲು ಪ್ರಾರಂಭಿಸಬೇಕು.

### *ಈಗ ಪೇಪರಿನಲ್ಲಿ, ರೇಡಿಯೋ, ಟಿ.ವಿ., ಪುಸ್ತಕಗಳಲ್ಲಿ ಲೈಂಗಿಕ ಶೋಷಣೆ ಎಂದು ಕೇಳುತ್ತೇವೆ. ಇದು ಏನು ?*

ದೊಡ್ಡವರು ಲೈಂಗಿಕವಾಗಿ ಕಿರುಕುಳ ಕೊಡುವುದನ್ನು ಅಥವಾ ಇತರರನ್ನು ಲೈಂಗಿಕವಾಗಿ ಶೋಷಣೆ ಮಾಡುವುದನ್ನು ಲೈಂಗಿಕ ಶೋಷಣೆ ಎನ್ನುತ್ತಾರೆ. ಉನ್ನತ ಅಧಿಕಾರಿಗಳು ಅಥವಾ ಕೆಲಸ ಮಾಡುವ ಸ್ಥಳದಲ್ಲಿರುವವರು ಮತ್ತು ಮೊದಲಾದವುಗಳಿಂದ ಕಿರುಕುಳ ಕೊಡುತ್ತಾರೆ. ಇದು ಪ್ರತ್ಯೇಕವಾಗಿ ದೈಹಿಕ ಸಂಪರ್ಕವಲ್ಲದಿದ್ದರೂ ಲೈಂಗಿಕ ಶೋಷಣೆಯೆಂದು ಕರೆಯಲ್ಪಡುತ್ತದೆ. ಹುಡುಗರಿಗೂ, ಹುಡುಗಿಯರಿಗೂ ಈ ರೀತಿ ಕಿರುಕುಳ ಕೊಡುತ್ತಾರೆ. ಆದುದರಿಂದ ಹುಡುಗ ಅಥವಾ ಹುಡುಗಿ ಇಂತಹ ವ್ಯಕ್ತಿಗಳಿಂದ ದೂರವಿರಬೇಕು. ತಂದೆ ತಾಯಿಗಳಿಗೆ ಕೂಡಲೇ ವಿಷಯ ತಿಳಿಸಬೇಕು.

ತುಂಬಾ ಕೃತಜ್ಞತೆಗಳು ಆಂಟಿ. ನಾವು ಅನೇಕ ವಿಷಯಗಳನ್ನು ತಿಳಿದೆವು. ಈ ವಿಷಯಗಳನ್ನು ತಿಳಿಯಲು ಸಾಧ್ಯವಾಗದಿದ್ದರೆ ನಾವು ತಿಳಿಯದೆ ತಪ್ಪು ಮಾಡಿ ಬಿಡುತ್ತಿದ್ದೆವು. ಸಿಂಧು ಮತ್ತು ರಾಣಿ ಒಟ್ಟಿಗೆ ಹೇಳಿದರು.

ಚಿಕ್ಕಮ್ಮ ನನ್ನನ್ನು ಬೈದದ್ದು ಏಕೆಂದು ನನಗೆ ಅರ್ಥವಾಯಿತು. ಇನ್ನು ಸತೀಶ ಮಾತ್ರವಲ್ಲ, ಯಾರೊಂದಿಗೂ ನಾನು ಅಮಿತ ಸಲುಗೆಯಿಂದ ವರ್ತಿಸುವುದಿಲ್ಲ. ಕೋಣೆಯಲ್ಲಿ ಕುಳಿತುಕೊಳ್ಳಿಸುವುದಿಲ್ಲ. ತುಂಬಾ ಕೃತಜ್ಞತೆಗಳು ಆಂಟಿ.

ಇಷ್ಟು ಮಾತ್ರವಲ್ಲ ಕುಟುಂಬದ ಅಭಿವೃದ್ಧಿಗೆ ನಮ್ಮ ದೇಶದಲ್ಲಿ ಇರುವ ನಿಯಮಗಳ ಬಗ್ಗೆ, ಮಹಿಳೆಯರ ಹಕ್ಕು, ಕರ್ತವ್ಯಗಳ ಬಗ್ಗೆ ತಿಳಿಯಬೇಕು. ವಿಷಯಗಳನ್ನು ತಿಳಿಯುವ ಯಾವುದೇ ಅವಕಾಶವನ್ನು ನಷ್ಟ ಮಾಡಬಾರದು. ತಿಳುವಳಿಕೆ ಪಡೆದು ಶೋಷಣೆಯಿಂದ ಮುಕ್ತರಾಗಬೇಕು.

### *ಋತುಸ್ರಾವದ ಸಮಯದಲ್ಲಿ ಮಹಿಳೆ ಎಲ್ಲರೊಂದಿಗೆ ವಾಸಿಸುವುದು ಸರಿಯೇ ?*

ಇದೆಂತಹ ಪ್ರಶ್ನೆ. 'ಋತುಸ್ರಾವ' ಎಂಬುದು ಅಶುದ್ಧವಾದ ಒಂದು ಕ್ರಿಯೆಯಲ್ಲ. ನಾವು ಆಹಾರವನ್ನು ಸೇವಿಸಿದರೆ ಮರುದಿನ ಅದನ್ನು ವಿಸರ್ಜಿಸುತ್ತೇವೆ. ಇಲ್ಲದಿದ್ದರೆ ಹೊಟ್ಟೆನೋವು ಆರಂಭವಾಗಿ, ವಾಂತಿಯಾಗಿ ಹಸಿವಿಲ್ಲದಿರುವಿಕೆ ಮೊದಲಾದವು ಆರಂಭವಾಗುತ್ತದೆ.

ಹೀಗೆಯೇ ಒಬ್ಬ ಮಹಿಳೆ ತಾಯಿಯಾಗುವ ಸಿದ್ಧತೆ ನಡೆಯುತ್ತದೆ. ಈ ತಯಾರಿ ನಡೆದು 28 ದಿನಗಳ ಕಾಯುವಿಕೆಯ ನಂತರವೂ ತಾಯಿಯಾಗುವ ಕ್ರಿಯೆ ನಡೆಯದಿದ್ದರೆ, ಆ ತಯಾರಿಯನ್ನೆಲ್ಲಾ ತೆಗೆದು ಹೊಸ ತಯಾರಿಗಾಗಿ ಗರ್ಭಪಾತ್ರವನ್ನು ಸಜ್ಜುಗೊಳಿಸುವಿಕೆಯೇ ಮೆನ್ಸಸ್ ಅಥವಾ ಋತುಸ್ರಾವ. ಈ ಸಮಯದಲ್ಲಿ ಯಾವುದೇ ಕಾರಣದಿಂದಲೂ ಕೂಡಾ ಹುಡುಗಿಯರನ್ನು ಇತರರಿಂದ ದೂರ ಮಾಡಬಾರದು. ಎಲ್ಲರೊಂದಿಗೆ ಪ್ರೀತಿಯಿಂದ ಸಂತೋಷದಿಂದ ಬಾಳುವುದರಿಂದ ಹೊಟ್ಟೆನೋವಿನಿಂದಲೂ ಋತುಸ್ರಾವದ ಸಮಯದಲ್ಲಿ ಬರಬಹುದಾದ ರೋಗಗಳಿಂದಲೂ ರಕ್ಷಣೆ ಪಡೆಯಲು ಸಾಧ್ಯವಾಗುತ್ತದೆ.

ಇಂದು ಕೂಡಾ ಕೆಲವು ಸಮುದಾಯಗಳಲ್ಲಿ ಋತುಸ್ರಾವದ ಸಮಯದಲ್ಲಿ ಹುಡುಗಿಯರನ್ನು

ಬೇರೆ ಮಾಡಿ ನಿಲ್ಲಿಸುತ್ತಾರೆ. ಇದು ಸರಿಯಲ್ಲ. ಎಲ್ಲರೂ ವಿಷಯಗಳನ್ನು ಅರ್ಥಮಾಡಿ, ವಿದ್ಯಾಭ್ಯಾಸ ಮಟ್ಟ ಅರಿದಂತೆ ಈ ವಿಷಯವನ್ನು ಎಲ್ಲರೂ ಮನದಟ್ಟು ಮಾಡಿ ಎಲ್ಲರಿಗೂ ವಿಷಯ ತಲುಪಿಸಲು ನಾವು ಪ್ರಯತ್ನಿಸಬೇಕಾಗಿದೆ.

ಋತುಸ್ರಾವದ ಸಮಯದಲ್ಲಿ ಮಹಿಳೆಯನ್ನು ಮನೆಯಿಂದ ದೂರ ಮಾಡುವುದಕ್ಕಿಂತ ಮನೆಯವರೆಲ್ಲರೂ ಪ್ರೀತಿಯಿಂದ ಪಾಲನೆ ಮಾಡಿ ಅಂತಹ ಒಂದು ವಿಷಯವೇ ಇದೆ ಎಂಬುದನ್ನು ಯಾರೂ ತಿಳಿಯದ ವಾತಾವರಣ ನಿರ್ಮಿಸಿ ಮಾನಸಿಕ ಧೈರ್ಯ ನೀಡಬೇಕಾಗಿದೆ.

# ನೋಸರ್ ಇಂಡಿಯಾ

ನೋಸರ್ ಇಂಡಿಯಾವು ಮಾರ್ಚ್ 15, 1992 ಕ್ಕೆ ಪ್ರಾರಂಭವಾಗಿ ಸೆಪ್ಟೆಂಬರ್ 29, 1993 ಕ್ಕೆ ರಿಜಿಸ್ಟಾರಾಗಿ ಕಾರ್ಯರೂಪಕ್ಕೆ ಬಂತು. ಇದರ ರಿಜಿಸ್ಟಾರ್ ನಂಬರ್ ಎಸ್410/93. ನೋಸರ್ ಇಂಡಿಯಾವು ಮಾನವ ಹಕ್ಕುಗಳು, ಗ್ರಾಹಕ ಹಾಗೂ ಬಳಕೆದಾರರ ಹಕ್ಕುಗಳು, ಪಂಚಾಯತ್ ರಾಜ್, ಮಹಿಳಾ ಶಕ್ತೀಕರಣ, ಮೊಲೆ–ಹಾಲು ಕುಡಿಸುವಿಕೆ, ಕುಟುಂಬ ಶಕ್ತೀಕರಣ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಭಾರತದ ವಿವಿಧ ಭಾಗಗಳಲ್ಲಿ ನಡೆಸುತ್ತಿದೆ.

ನೋಸರ್ ಇಂಡಿಯಾವು ಈ ನಿರ್ವಹಣೆಯ ತಿಳುವಳಿಕೆಯನ್ನು ಜೀಪು ರ್‍ಯಾಲಿಯ ಮುಖಾಂತರ ನೀಡುತ್ತಿದೆ. ನಾವು ಈಗಾಗಲೇ ಜೀಪು ಜಾಥವನ್ನು ಕೇರಳದ ವಿವಿಧ ಸ್ಥಳಗಳಲ್ಲಿ ಗ್ರಾಹಕ ಹಾಗೂ ಬಳಕೆದಾರರ ಹಕ್ಕು, ಮಾನವೀಯ ಹಕ್ಕು, ಮೊನಿಟರಿಂಗ್ ಐ ಎಂ ಎಸ್ ಏಕ್ಟ್ 1992, ಪಂಚಾಯತ್ ರಾಜ್, ವಾಹನ ಅಪಘಾತ ನಿರಪರಾಧಿ ಹಕ್ಕು ಮೊದಲಾದವುಗಳ ಕುರಿತು ಮಾಹಿತಿ ನೀಡಿದ್ದೇವೆ.

ಕಳೆದ ಎಂಟು ವರ್ಷಗಳಿಂದ ನೋಸರ್ ಇಂಡಿಯಾವು ಕೇರಳದಲ್ಲಿ ಜನರ ಬೆಂಬಲದಿಂದ ವಿವಿಧ ಸಂಘ ಸಂಸ್ಥೆಗಳಿಂದ, ಪಂಚಾಯತುಗಳ ಸಹಾಯದಿಂದ ಪಂಚಾಯತ್‌ರಾಜ್ ಶಕ್ತೀಕರಣ ಮಾಡಲು ಪ್ರಯತ್ನಿಸುತ್ತಿದೆ.

ನೋಸರ್ ಇಂಡಿಯಾವು ವಿಧವೆಯರಿಗೆ, ತಬ್ಬಲಿಗಳಿಗೆ, ಪ್ರಾಯವಾದವರಿಗೆ, ಮಾರಕ ರೋಗಗಳಿಂದ ನರಳುವವರಿಗೆ ಆಶ್ರಯವನ್ನು ಹಾಗೂ ಸ್ವ–ಉದ್ಯೋಗ ಉದಾ : ಮೇಣದ ಬತ್ತಿ ತಯಾರಿ, ಸಾಬೂನು, ಕೊಡೆ, ಪುಸ್ತಕ, ಬುಕ್ ಬೈಂಡಿಂಗ್, ಟೈಲರಿಂಗ್, ಸ್ಕ್ರೀನ್ ಪ್ರಿಂಟಿಂಗ್, ವಾಚ್ ಅಸೆಂಬ್ಲಿ, ಆಹಾರ ಸಂರಕ್ಷಣೆ, ಜೈವಿಕ ಕೃಷಿ ಹೀಗೆ ಹಲವಾರು ತರಬೇತಿ ಕ್ಲಾಸುಗಳನ್ನು ನಡೆಸುತ್ತದೆ.

ನೋಸರ್ ಇಂಡಿಯಾವು ಈಗಾಗಲೇ 82 ಪುಸ್ತಕಗಳನ್ನು ಪ್ರಕಾಶಿಸಿದೆ. ಇನ್ನು ಹಲವಾರು ಪುಸ್ತಕಗಳನ್ನು ತಯಾರಿಸಲು ಪ್ರಯತ್ನಿಸುತ್ತಿದೆ.

ನೋಸರ್ ಇಂಡಿಯಾವು ಬೆಸ್ಟ್ ಎನ್.ಜಿ.ಒ, ಅಶೋಕ ಫೆಲೋಶಿಪ್ ಮತ್ತು ಸಿಟಿಜನ್‌ಬೇಸ್ ಇನ್‌ವೆಸ್ಟ್‌ಮೆಂಟ್ ಎಂಬ ಪುರಸ್ಕಾರಗಳನ್ನು ಪಡೆದಿದೆ.

ನಮ್ಮ ಕೆಲಸ ಫಲಪ್ರದವಾಗಲು ನಿಮ್ಮ ಸಹಾಯವನ್ನು ಆಶಿಸುತ್ತೇವೆ.


ನೋಸರ್ ಭವನ
ಕನ್ನಟಿಕಾನ
ಪೆರ್ಲ – 671551

ನೋಸರ್ ಇಂಡಿಯ
ಪಾಯಂ P.O. – 670704

E-mail : nocerindia@gmail.com



Printed and published by NOCER - India, Payam 670704,
RCH Project

*Printed rainbow BDK Ph: 285398*